
# ಕೊರವಂಜಿ

Koravanji



ಏಪ್ರಿಲ್

೧೯೫೫

★

ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ರಾಮಕೃಷ್ಣ
ಶ್ರೀಮತಿ|| ಸುನಂದಮ್ಮ
ಶ್ರೀ|| ಪಾಟೂಳಿ
ಶ್ರೀ|| ರೇವಣ್ಣ
ಶ್ರೀ|| ಶನಿ
ಶ್ರೀ|| ಶ್ರೀನಾಥ
ಶ್ರೀಮತಿ|| ಕೇಸರಿ
ಶ್ರೀ|| "ಕೇಫ"
ಶ್ರೀ|| ಕಾಮತ್
ಶ್ರೀ|| ಅ. ರಾ. ಸೇ.
ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ ಕಾಣು ನಾಲ್ಕು

ತಿಳಿನಗೆಯ ಮಾಸಪತ್ರಿಕೆ

ಶೀಘ್ರದಲ್ಲಿಯೇ
ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ ಬರಲಿದೆ.



ನರಸೂರವರ—

# ಪೋರ್ಟರ್ ಕಂದನ್

—[ ತಮಿಳು ]—

★

ಎಂ. ಕೆ. ರಾಧಾ — ಜಿ. ವರಲಕ್ಷ್ಮಿ
ಎಂ. ಎನ್. ನಂಬಿಯಾರ್
ರಸಭರಿತ ಕಥಾವಸ್ತುವನ್ನುಳ್ಳ ಮನೋಹರ ಚಿತ್ರ

★

ನಿರ್ದೇಶನ :
ವೇಂಬು

ಸ್ಟುಡಿಯೋ :
ನರಸು

A VIJAYA TALKIE RELEASE

## ಮಾರ್ಚಿ 31 ರಿಂದ ಅಮೋಘ ಪ್ರಾರಂಭ

**ಬೆಂಗಳೂರು:** ಸ್ಟೇಟ್ಸ್

**ಮೈಸೂರು:** ಚಾಮುಂಡೇಶ್ವರಿ

ಮುಂದಿನ ಒಡಲ್ಪರ್ವ —

**ಕೋಲಾರ:** ಪ್ರಭಾತ್



## ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದೆ


ಬೆಂಗಳೂರು :

**ನ್ಯೂ ಸಿಟಿ — ಜೈಹಿಂದ್**

| ಮೈಸೂರು : | ಮಂಗಳೂರು : | ಶಿವಮೊಗ್ಗ : | ಚಿತ್ರದುರ್ಗ : |
|---|---|---|---|
| ಲಕ್ಷ್ಮಿ | ನ್ಯೂ ಚಿತ್ರಾ | ಸುದರ್ಶನ | ರೂಪವಾಣಿ |

ಹಾಸನ :

ಪಿಕ್ಚರ್ ಪ್ಯಾಲೇಸ್




**ಬಿ. ಎಸ್. ಸರೋಜ ★ ಪ್ರೇಂನಜೀರ್ ★ ಕುಮಾರಿ ತಂಗಂ**

**ಏಪ್ರಿಲ್ 1 ರಿಂದ**

ದಾವಣಗೆರೆ : **ವಸಂತ**

★


A TALLAM RELEASE

## ಏಪ್ರಿಲ್ 14 ರಿಂದ ಅಮೋಘ ಪ್ರಾರಂಭ

ಬೆಂಗಳೂರು:

**ಸ್ವಸ್ತಿಕ್—ನ್ಯೂಸಿಟಿ—ಶ್ರೀ**


ಮೈಸೂರು:—**ಲಕ್ಷ್ಮಿ** ಕೆ. ಜಿ. ಎಫ್:—**ಒಲಂಪಿಯಾ**




Koravanji, April 1955

ಏಪ್ರಿಲ್ ತಿಂಗಳಲ್ಲಿ

ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ ಪ್ರದರ್ಶನಾರಂಭ




For Bookings in Mysore State

Coorg and South Canara Contact

SRI RAGHAVENDRA PICTURES

GANDHINAGAR, : : BANGALORE 2,

# ಕೊರವಂಜಿ

ಸಂಪುಟ ೧೪ ಏಪ್ರಿಲ್ ೧೯೫೫ ಸಂಚಿಕೆ ೧

## ಮೊದಲ ಮಾತು

ಮನ್ಮಥನಾಮ ಸಂವತ್ಸರ. ಅನಂಗನ ಹೆಸರು ಹೇಳುವ ಹೊಸ ವರ್ಷ. ಅದಕ್ಕಾಗಿಯೇ ತುಂಬಿದದೆಯಿಂದ, ಹೊರ ಆಡಂಬರವಿಲ್ಲದೆ, ಕೊರವಂಜಿಯು, ನಮ್ಮ ಓದುಗರಿಗೆಲ್ಲಾ, ನಮ್ಮ ನೆರವಿಗೆ ಬಂದವರಿಗೆಲ್ಲಾ, ನಮ್ಮ ಲೇಖಕ ಲೇಖಕಿಯರಿಗೆಲ್ಲಾ, ಸುಖ ಶಾಂತಿಗಳು ದೊರಕಲೆಂದು ಕಣಿ ಹೇಳಬಯಸುತ್ತಾಳೆ.

ಭಾರತದ ಸುಮಾರು ಎಲ್ಲಾ ಸಂಸ್ಥಾನಗಳ ಬಡ್ಜೆಟ್‌ನಂತೆಯೇ ಕೊರವಂಜಿಯ ಬಡ್ಜೆಟ್ಟೂ ಕೂಡ ಖೋತಾ ಬಡ್ಜೆಟ್ಟೇ! ಅದೇ ಕಾರಣದಿಂದಲೇ ಕೊರವಂಜಿಯೂ ಸರ್ಕಾರಗಳಂತೆಯೇ ಕುಂಟುತ್ತ, ತೆವಳುತ್ತ, ಒಮ್ಮೊಮ್ಮೆ ಚಿಮ್ಮುತ್ತ, ಎಗರುತ್ತಾ ಸಾಗುತ್ತಿದ್ದಾಳೆ. ಕೊರವಂಜಿಗೂ ಸರ್ಕಾರಕ್ಕೂ ಪ್ರಜಾ ಬೆಂಬಲ ಬೇಕೇ ಬೇಕು! ಬೆಂಬಲ ದೊರಕಿದಷ್ಟೂ ಚೆನ್ನಾಗಿ ಕಾರ್ಯ ಸಾಗುತ್ತದೆ ಎಂದು ಭರವಸೆ ಕೊಡುತ್ತೇವೆ

ಕೊರವಂಜಿಗೆ ೧೪ ವರ್ಷ ವಯಸ್ಸು. ತುಂಬಿ ಬೆಳೆಯಬೇಕಾದ ವರ್ಷ. ಚಿಗುಳಿ ಹಂಚಬೇಕಾಗಬಹುದಾದ ವಯಸ್ಸಿನಲ್ಲೂ ಕೃಶವಾಗಿರುವುದು. ನಮ್ಮ ಜನರನ್ನು ಪ್ರತಿಬಿಂಬಿಸುವುದರಿಂದಲೇ ಎಂದು ಮನಸ್ಸಿಗೆ ಸಮಾಧಾನ ತಂದುಕೊಂಡಿದ್ದೇವೆ.

**ನಗೆಗನ್ನಡಕ್ಕೆ ಹೊಸ ವರ್ಷದಲ್ಲಿ ಶುಭಶ್ರೇಯಸ್ಸುಂಟಾಗಲಿ!**

# ಕುಹಕಿಡಿಗಳು

ಆಂಧ್ರದ ಚುನಾವಣಾ ಸುದ್ದಿಗಳನ್ನುಳ್ಳ ಪತ್ರಿಕೆಗಳು ನಮ್ಮ ದೇಶದಲ್ಲಿಗಿಂತ ಬಲು ಹೆಚ್ಚಾಗಿ ಅಮೇರಿಕಾದಲ್ಲಿ ಖರ್ಚಾದುವಂತೆ.

* * *

ಮಂತ್ರಿಮಂಡಲದ ಏರುಪೇರುಗಳನ್ನು ಪಾಕೀಸ್ಥಾನವು ರಷ್ಯನ್ನರಿಂದ ಕಲಿತು ಕೊಂಡಿತು ಎಂಬುವುದು ಶುದ್ಧ ಸುಳ್ಳಂತೆ.

* * *

ನಾಲ್ವರು ಬಲತಾಯಂದಿರು, ನಾಲ್ವರು ಹೆಂಡತಿಯರು, ನಾಲ್ವರು ಬಲ ತಮ್ಮಂದಿರು, ನಾಲ್ವರು ಬಲ ಅಣ್ಣಂದಿರು ಇರುವುದರ ಜತೆಗೆ ನಾಲ್ವರು ಬಲ ಅಕ್ಕ ತಂಗಿಯರು ತಮ್ಮ ವಿವಿಧ ಮಕ್ಕಳೊಂದಿಗೆ ಬಂದು ಒಬ್ಬ ನತದೃಷ್ಟನ ಮನೆಯಲ್ಲಿ ವಾಸಿಸುವಂತಾದಾಗ—

— ಇಂದಿನ ಪಾಕಿಸ್ಥಾನದ ಆಗುಹೋಗುಗಳು ಸ್ವಲ್ಪ ಅರ್ಥವಾಗಬಹುದು.

* * *

ಏಪ್ರಿಲ್ ಒಂಧನೆಯ ತಾರೀಖನ್ನು "ಮಂಕರ ದಿನ"ವನ್ನಾಗಿ ಪಾಶ್ಚಾತ್ಯರು ಆಚರಿಸುತ್ತಾರಂತೆ.

— ನಮ್ಮವರು ಆ ದಿನದಿಂದ ಹೊಸ ವರ್ಷದ ಲೆಕ್ಕ ಆರಂಭಿಸುತ್ತಾರೆ. ಆದಕ್ಕೇ ನಮ್ಮ ಲೆಕ್ಕದ ...ಉತ್ತರ!!

* * *

ಕೊಡಗಿನಲ್ಲಿ ಕೃತಕ ಮಳೆಯಿಂದ ಕಾಫೀ ತೋಟವನ್ನು ಬೆಳೆಸಿದ್ದಾರಂತೆ—

-- ನಾವು ಕುಡಿಯುವ ಕಾಫಿ ರುಚಿ ನೋಡಿದ ಮೇಲೆ ಆ ತೋಟದ ಕಾಫಿಯೇ ಅಂತ ಧೈರ್ಯವಾಗಿ ಹೇಳಬಹುದು.

* * *

ಮೈಸೂರಿನವರ ಮೇಲೆ ರಷ್ಯನರು ಫುಟ್‌ಬಾಲ್ ಆಡಿದಾಗ ಏಳು ಗೋಲು ಗಳನ್ನು ಹಾಕಿದರಂತೆ.

— ಏನು ಮಹಾ! ರಷ್ಯನರ ಹನ್ನೊಂದು ಜನದ ಕಡೆಗೇ ನಮ್ಮವರು ನಾಲ್ಕೈದು ಜನ ಆಡಿದ ಹಾಗಿತ್ತು ಅವತ್ತು — ಅಂದ ಮೇಲೆ ೧೭ ಗೋಲು ಆಗದಿದ್ದುದು ಆಶ್ಚರ್ಯ!!

# ಉರಿಗಾಳು

ಮರದಮೇಲೆಯೇ ವಾಸಮಾಡುತ್ತಿರುವ ಸ್ವಾಮಿಗಳೊಬ್ಬರು ಶ್ರೀ ರಾಧಾಕೃಷ್ಣನ್‌ರವರಿಗೆ "ಬ್ರಹ್ಮಋಷಿ" ಎಂಬ ಬಿರುದನ್ನು ದಯಪಾಲಿಸುವ ಸಲುವಾಗಿ ಕೆಳಗಿಳಿದು ಬರುತ್ತಾರಂತೆ, ಶ್ರೀ ರಾಧಾಕೃಷ್ಣನ್‌ರವರೇ, ಸ್ವತಃ, ಮರ ಹತ್ತಿ ಅದನ್ನು ಅವರ ಹಸ್ತದಿಂದ ಸ್ವೀಕರಿಸಲೊಪ್ಪಿದರೆ, ಸ್ವಾಮಿಯವರು ತಮ್ಮ ಉಚ್ಚಸ್ಥಾನದಿಂದ ಇಳಿಯಬೇಕಾಗಿರಲಿಲ್ಲವಲ್ಲಾ, ಎಂಬುದೇ ನಮ್ಮ ವ್ಯಥೆ.

* * *

ತಾನು ಲಂಚ ತೆಗೆದುಕೊಂಡದ್ದು ನಿಜ, ಎಂದು ರುಜುವಾತಾದರೆ, ಕೂಡಲೇ ತಮ್ಮ ಮಂತ್ರಿಸ್ಥಾನಕ್ಕೆ ರಾಜಿನಾಮೆ ಕೊಡುವುದಾಗಿ ಪೆಪ್ಸು ಸಂಸ್ಥಾನದ ಮಂತ್ರಿ ಶ್ರೀ ಲಹರಿಸಿಂಗ್‌ರವರು ಘೋಷಿಸಿದ್ದಾರೆ ... ಅನೇಕರಿಗೆ ಇಷ್ಟು ಧೈರ್ಯ ಬರುವುದಿಲ್ಲ.

* * *

ಯೊಲ್ಟಾದಲ್ಲಿ ರೂಸ್‌ವೆಲ್ಟ್ ಚರ್ಚಿಲ್ ಸ್ಟಾಲಿನ್ ಪ್ರಭೃತಿಗಳು ನಡೆಸಿದ ಸಮ್ಮೇಳನದ ವರದಿ ಸಂಪೂರ್ಣವಾಗಿ ಅಮೇರಿಕಾದಲ್ಲಿ ಪ್ರಕಟವಾಯಿತು........ ಇಂಗ್ಲೀಷ್ ದೃಷ್ಟಿಯಿಂದ, ಅದು ತಪ್ಪು, ಎಂದು ಇಂಗ್ಲೀಷಿನವರು ವಾದಿಸಿದ್ದಾರೆ.... ಅಮೇರಿಕನ್‌ರ ನುಡಿಗೂ ಇಂಗ್ಲೀಷರ ನುಡಿಗೂ, ಗಣನೀಯವಾದ ವ್ಯತ್ಯಾಸವಿದೆ. ಏಕೆ, ಅಮೇರಿಕನ್‌ರ ನುಡಿಗೂ ಅವರ ನಡತೆಗೂ ವ್ಯತ್ಯಾಸವಿದೆಯಲ್ಲಾ ...

* * *

ದಿನವೊಂದಕ್ಕೆ ಸರಾಸರಿ ೫೪ ಬಸ್ಸುಗಳು, ಓಡಾಡಲಾರದೆ ಬಿದ್ದಿರುತ್ತವೆ, ಡಿಲ್ಲಿಯಲ್ಲಿ, ಎಂದು ಶ್ರೀ ಅಳಗೇಶನ್‌ರವರು ತಿಳಿಸಿದರು.... ಬೆಂಗಳೂರಲ್ಲೂ ಹಾಗೆಯೇ, ತ್ರಾಣವಿಲ್ಲದೆ, ರಸ್ತೆಗಳಲ್ಲಿ, ಅಲ್ಲಲ್ಲಿ, ಅರ್ಧದಾರಿಯಲ್ಲೇ, ನಿಂತಿರುತ್ತವೆ! ನೂಕಿದರೂ ಇಲ್ಲ, ಎಳೆದರೂ ಇಲ್ಲ.

* * *

ಟಿ. ಟಿ. ಕೃಷ್ಣಮಾಚಾರಿ, ಜಾತಿಸೂಚಕ ಪದಗಳನ್ನು ತೆಗೆದುಹಾಗಿ, ಬರೀ ಟಿ. ಟಿ. ಕೃಷ್ಣ ಎಂದು ಹೆಸರು ಬದಲಾಯಿಸಿಕೊಂಡಿದಾರೆ.... ಆದರೂ, ಅವರಿಗೆ ಇಂಜಿನೀಯರಿಂಗ್ ಕಾಲೇಜು ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಸಿಗುವ ಸಂಭವ ಕಡಿಮೆ.

* * *

ಡಾ|| ವಿ. ಕೆ. ಆರ್. ವಿ ರಾವ್‌ರ ಅಧ್ಯಕ್ಷತೆಯಲ್ಲಿ, ಶ್ರೀ ಗೋವಿಂದದಾಸ ಸೇಠ್‌ರವರು ಜಾತಿಸೂಚಕ ಪದವಾದ "ಸೇಠ್" ಎಂಬುದನ್ನು ತ್ಯಾಗಮಾಡಿದರು .. ರಾಯರೂ ಕೂಡ, ಡಾ|| ವಿ. ಕೆ. ಆರ್. ವಿ. ಆರ್. ಎ, ಓ, ಎಂದು ಹೆಸರು ಬದಲಾಯಿಸಿರಬೇಕೆಂದು ತೋರುತ್ತದೆ.

* * *

ಉತ್ತರ ಪ್ರದೇಶದ ಹಲವು ಮುನಿಸಿಪಾಲಿಟಿಗಳು, ತಮ್ಮ ಶಾಲಾ ಅಧ್ಯಾಪಕರಿಗೆ, ಹತ್ತುದಿನದ ಪ್ರತ್ಯೇಕ ಶಿಕ್ಷಣ ಶಿಬಿರಗಳನ್ನು ನಡೆಯಿಸುತ್ತಿದಾರೆ ...ಮುನಿಸಿಪಲ್ ಕಂದಾಯದ ವಸೂಲಿಗೆ ಇರುವ ತೊಂದರೆಗಳನ್ನು ಉಪಾಧ್ಯಾಯರಿಗೆ ಹತ್ತು ದಿನವೂ ತಿಳಿಸಲಾಗುವುದಂತೆ.

* * *

ಮದ್ರಾಸ್ ಪ್ರಾಂತ ಸರ್ಕಾರದವರು ಅಲ್ಲಿಯ ಎಲಿಮೆಂಟರಿ ಗ್ರೇಡ್ ಉಪಾಧ್ಯಾಯರುಗಳಿಗೂ, ಮುನಿಸಿಪಲ್ ಹಾಗೂ ಖಾಸಗಿ ಶಾಲಾ ಉಪಾಧ್ಯಾಯರಿಗೂ, ಅವರ ಸಂಬಳದ ಕಾಲುಭಾಗ ಪೆನ್‌ಷನ್ನಾಗಿ ಕೊಡಲೊಪ್ಪಿದ್ದಾರಂತೆ ...ಅನೇಕ ಸಂಸ್ಥಾನಗಳಲ್ಲಿ ಈಗಲೂ ಅವರಿಗೆ....ಕಾಲೇ.

* *

ಪೆನಿಸಿಲಿನ್ ಎಂಬ ಔಷಧಿಯನ್ನು ಕಂಡುಹಿಡಿದ ಫ್ಲೆಮಿಂಗ್ ಎಂಬುವರು, ಅನೇಕ ವರ್ಷಗಳ ಹಿಂದೆ, ಚರ್ಚಿಲ್‌ರವರನ್ನು ನೀರಿಂದ ಎಳೆದುಹಾಕಿ ಬದುಕಿಸಿದ್ದರಂತೆ....ಆಗ ಅವರಿಗೆ ಆತ ಚರ್ಚಿಲ್ ಎಂಬುದು ಗೊತ್ತೇ ಇರಲಿಲ್ಲವಂತೆ, ಪಾಪ.

* * *

ಸುಪ್ರಸಿದ್ಧ ಸಿನಿಮ ತಾರ ಡೇವಿಡ್ ಎಂಬುವರು ಲಾಯರಾಗಿದ್ದರಂತೆ; ಕಡೆಗೆ ಅದನ್ನು ಬಿಟ್ಟು ನಾಟಕ ರಂಗಕ್ಕಿಳಿದು ನಟನ ಕೌಶಲ್ಯವನ್ನು ಸಂಪಾದಿಸಿದರಂತೆ. ಏಕೆ ...ಅನೇಕರು ಲಾಯರಾಗಿದ್ದುಕೊಂಡೇ ನಟನ ಕುಶಲರಾಗಿದ್ದಾರಲ್ಲಾ ...

* * *

ಅಂತರಾಷ್ಟ್ರೀಯ ಗೊಂಬೆ ಪ್ರದರ್ಶನದ ಸಂಚಾಲಕರನ್ನು ಟೀಕಿಸುತ್ತ, ತಮ್ಮನ್ನು ಅಲ್ಲಿ ಪ್ರದರ್ಶಿಸಬೇಕಾಗಿತ್ತೆಂದು ಅನೇಕ ಕಾಂಗ್ರೆಸ್ ಮಂತ್ರಿಗಳು ಪತ್ರ ಬರೆದಿದ್ದಾರಂತೆ.

* * *

ಆನೆಗಳನ್ನು ಕೊಂಡುಕೊಳ್ಳುವವರೇ ಇಲ್ಲವಾಗಿದೆಯಂತೆ....ಅಂದರೆ, ಜಗದ್ಗುರುಗಳ ಸಂಖ್ಯೆ ಕಡಿಮೆಯಾಗುತ್ತಿದೆ, ಎಂದರ್ಥ.

---

# ಕೊ೦ವಾವಲೋಕನ

ಕೈಮುಗ್ಗದ ಮೇಲುಕೋಟೆ ಅಂಚಿನ ಪಂಚೆಯನ್ನು ವಾರಣವಾಗಿ ಪಂಚಕಚ್ಚೆ ಹಾಕಿಕೊಂಡು, ಕೈಮುಗ್ಗದ ರೇಷ್ಮೆಜುಬ್ಬವನ್ನು ಲಕ್ಷಣವಾಗಿ ಧರಿಸಿ, ಸರಿಗೆ ಉತ್ತರೀಯ ವನ್ನು ನೆರಿನೆರಿಯಾಗಿ ಹೊದ್ದುಕೊಂಡು ಕೊರವ ಕ್ಲಬ್ಬಿಗೆ ಬಂದಿಳಿದಾಗ, ಥೇಟ್ ಮನ್ಮಥನೇ ಹೊಸವರ್ಷದಲ್ಲಿ ಪ್ರತ್ಯಕ್ಷನಾದನೋ ಎಂದು ಒಂದು ಆರೆಕ್ಷಣ ಅನಿಸಿತು. ಮರುಕ್ಷಣ ಹೊಳೆಯಿತು "ಅನಂಗನಾದ ಮನ್ಮಥನಿಗೆ ಶಾಪ ವಿಮೋಚನೆಯಾಗಿ ಈಗ ದೃಢಾಂಗನಾಗಿರಬೇಕು" ಎಂದು

ಅವನ ಉಡುಪನ್ನು ತಲೆಯಿಂದ ಕಾಲುತನಕ ನೋಡಿ, ಅನಂತರ ಅದೇ ದೃಷ್ಟಿ ಯನ್ನು ಕುಳ್ಳಿಯ್ಯಂಗಾರಿ ಕಡೆಗೆ ತಿರುಗಿಸಿದೆ. ಅದನ್ನು ಕಂಡ ಕೊರವ, ಸಾವಧಾನ ವಾಗಿ ಕುರ್ಚಿಯಮೇಲೆ ಕುಳಿತು ಉತ್ತರೀಯವನ್ನು ಸರಿಪಡಿಸಿಕೊಂಡು, ಎರಡುಸಲ ಪೆಲ್ಲಗೆ ಕೆನೆದು ನಂತರ ಹೇಳಿದ—

"ನೋಡಿದಿರಾ! ನನ್ನ ಅಲಂಕಾರಾನಾ! ಕೈಮುಗ್ಗದ ಸಪ್ತಾಹದಲ್ಲಿ ನನ್ನನ್ನು ಈ ದಿನ ಭಾಷಣಕ್ಕೆ ಕರೆದಿದ್ದರು. ಕೈಮಗ್ಗದವರ ಏಳಿಗೆಗೆ ಹಿತವಚನ ಹೇಳಲಿ ಅಂತ. ಕಾರಣ ಈ ದಿವ್ಯಾಲಂಕಾರಮಾಡಿಕೊಂಡು, ಗಂಟಲು ಸರಿಮಾಡಿಕೊಳ್ಳಲು ಏಲಕ್ಕಿ ಬಾಯಿಗೆ ಹಾಕಿಕೊಂಡು, ಮೂರುದಿನ ಪಬ್ಲಿಕ್ ಲೈಬ್ರರಿಗೆ ಹೋಗಿ ಕೈಮುಗ್ಗದ ಆಗುಹೋಗುಗಳನ್ನು ಓದಿಕೊಂಡು, ಕಾಲಕ್ಕೆ ಸರಿಯಾಗಿ ಭಾಷಣ ಮಂದಿರಕ್ಕೆ ಹೋದರೆ, ಅಲ್ಲಿ ನೂರು ಬಾವುಟ, ಐವತ್ತು ತೋರಣ, ಇಪ್ಪತ್ತು ದೀಪ, ಇಬ್ಬರು ಸರ್ಕಾರಿ ನೌಕರರು ಒಂದು ಧ್ವನಿವರ್ಧಕ ಯಂತ್ರ ಇಷ್ಟೇ ಇದ್ದುದು. ಆ ನೌಕರರಲ್ಲಿ ಒಬ್ಬಾತ ಸಪ್ತಾಹದ ಸಂಚಾಲಕ. ಇನ್ನೊಬ್ಬ ಅವನ ಕಾರ್ಯದರ್ಶಿ.

ಯಾರಿಗಪ್ಪಾ ನಾನು ಭಾಷಣ ಮಾಡೋದು ಎಂದು ಕೇಳಿದೆ.

ನಿಮ್ಮ ಭಾಷಣದ ಪ್ರತಿ ಕೊಡಿ ಸಾರ್. ಎಲ್ಲಾ ದೈನಂದಿನ ಪತ್ರಿಕೆಗಳಲ್ಲೂ ದೀರ್ಘವಾಗಿ ಪ್ರಚಾರಪಡಿಸುತ್ತೇವೆ" ಎಂದಂದ ಸಂಚಾಲಕ ಮಹಾಶಯ.

"ಕೈಮುಗ್ಗದವರೆಲ್ಲಾ ಎಲ್ಲಿ" ಅಂದೆ.

"ಅವರು ಕ್ಲಬ್ಬಿಗೆ ಹೋಗಿದ್ದಾರೆ. ಈ ಹೊತ್ತಿನಲ್ಲಿ ಅವರು ಸಾಮಾನ್ಯವಾಗಿ ಅಲ್ಲೇ" ಅಂದ, ಸಂಚಾಲಕನ ಕಾರ್ಯದರ್ಶಿ.

"ಭೇಷ್ ಜಾಣರು ಅವರು! ಅವರಿಗಿಂತ ನಾನೇನು ಮಂಕಲ್ಲ" ಎಂದು ಹೇಳಿ ನಾನೂ ಅಲ್ಲಿಂದ ನಮ್ಮ ಕ್ಲಬ್ಬಿಗೆ ಓಡಿಬಂದೆ ಎಂದು ಕೊರವ ವಿಶದೀಕರಿಸಿದ.

* * *

ನಾನೂ, ಕೊರವ, ಕುಳ್ಳೈಯಂಗಾರಿ ಮತ್ತು ಸಾಮಿ ಕ್ಲಬ್ಬಿನ ವರಾಂಡಾದಲ್ಲಿ ತುಂತುರುಹನಿ ಬಿದ್ದ ಸಂಜೆ, ಕೂತಿದ್ದೆವು. ಪಕ್ಕದ ವಾಚನಾಲಯದ ಕೊಠಡಿಯ ಕಿಟಕಿಯಿಂದ ಹೊಗೆ ಸುರುಳಿಸುರುಳಿಯಾಗಿ ಬರಹತ್ತಿತು. ಕೆಟ್ಟಕಾಯಿಲೆ ಬಂದಿದ್ದ, ರಾಜಕೀಯಕ್ಕೆ ಕೈಹಾಕಿದ್ದ ಹೆಗ್ಗಣವನ್ನು ಸುಟ್ಟರೆ ಏನು ದರಿದ್ರ ವಾಸನೆ ಬರುತ್ತದೆ! ಅದನ್ನೂ ಮೀರಿಸಿತ್ತು ಈ ಹೊಗೆಯ ವಾಸನೆ. ಮೂಗು ಮುಚ್ಚಿಕೊಂಡು, ನಾವು ನಾಲ್ವರೂ ಕುರ್ಚಿಗಳನ್ನೆತ್ತಿಕೊಂಡು ವರಾಂಡಾದ ಹೊರಗೆ ಹೋಗಿ ದೂರದಲ್ಲಿ ಹುಲ್ಲಿನ ಮೇಲೆ ಹಾಕಿಕೊಂಡು ಕೂತೆವು.

ಮೂರು ನಿಮಿಷ ಸುಧಾರಿಸಿಕೊಂಡಮೇಲೆ ಕೊರವ ಪಲುಕಿದ "ಇದೆಲ್ಲಾ ದೇಶಮುಖರ ಕೈವಾಡ" ಅಂತ.

"ಆ್ಞ?" ಎಂದು ಆರುಜತೆ ಕಂಬಳಿಹುಳುಗಳಂತಿದ್ದ ಹುಬ್ಬುಗಳು ಮೇಲಕ್ಕೆದ್ದುವು.

ನಮ್ಮ ಸಂದೇಹವನ್ನು ನಿವಾರಿಸಲೋಸುಗ ದಯಾಮಯನಾದ ಕೊರವ ಈ ರೀತಿ ಹೇಳಿದ—

"ಶ್ರೀ ದೇಶಮುಖರು ಎರಡನೇ ಪಂಚವಾರ್ಷಿಕ ಪ್ಲಾನಿನ ತಯಾರಿಕೆಗಾಗಿ ಸುಂಕ ಹಾಕಬೇಕಾದಾಗ ಹೊಗೇಸೊಪ್ಪಿನಮೇಲೆ ಬಲವಾಗಿ ಬರೆ ಎಳೆದರು. ನಮ್ಮ ವಾಚನಮಂದಿರದ ಕ್ಲಬ್ಬಿಗರು ಈ ಬರೆಯನ್ನು ಅನುಭವಿಸಲಾರದೆ, ತಮ್ಮ ತಮ್ಮ ಮನೆಯ ಅಂಗಳಗಳಲ್ಲಿ, ಬೃಂದಾವನಗಳಲ್ಲಿ ಹೊಗೇಸೊಪ್ಪನ್ನು ಬೆಳೆಯಲಾರಂಭಿಸಿದ್ದಾರೆ. ಕ್ಲಬ್ಬಿಗೆ ಬರುವ ಮುನ್ನ ನಾಲ್ಕೆಲೆಗಳನ್ನು ತರಿದು ಒಂದು ಚುಟ್ಟಾ ನಿರ್ಮಿಸಿಕೊಂಡು ಇಲ್ಲಿಗೆ ಬಂದು ಬೆಂಕಿ ಹಚ್ಚುತ್ತಾರೆ ಬೃಂದಾವನಗಳಿಗೆ ಅದೇನು ಗೊಬ್ಬರ ಹಾಕುತ್ತಾರೋ ಕಾಣೆ. ಆದರೆ ವಾಚನಮಂದಿರದ ಇಬ್ಬರು ಜವಾನರು ರಾಜೀನಾಮೆ ಇತ್ತರು. ಮೂರನೆಯವ ಸಕತ್ ಖಾಯಿಲೆ ಬಿದ್ದಿದ್ದಾನೆ. ನಾನೂ ಕೂಡ ಈ ಕ್ಲಬ್ಬಿಗೆ ರಾಜೀನಾಮೆಕೊಟ್ಟು ರಾಮಮಂದಿರಕ್ಕೆ ಸೇರಿಕೊಳ್ಳೋಣ ಅಂತ ನಿರ್ಧರಿಸಿದ್ದೇನೆ. ಶ್ರೀ ದೇಶಮುಖರಿಗೆ ರಿಟೈರ್ ಆದಮೇಲೆ ತಿರುಗಿ ಇಲ್ಲಿಗೆ ಬರೋಣ ಅಂತ ಅಂದುಕೊಂಡಿದ್ದೇನೆ"

ಎಂದೆಲ್ಲಾ ಹೇಳಿದ. ಪಾಪ! ಕೊರವನಿಗೆ ನಶ್ಯದ ಮೋಹ ಇತ್ತೀಚೆಗೆ.

* * *

---

## ಹುಚ್ಚಪ್ಪಗಳಿಗೆ

(ಪುರಂದರಾಯ ನಮಃ)

ಮಾನವ ಲೋಕ ದೊಡ್ಡದು—ಇದ
ಹಾಳು ಮಾಡಲು ಬೇಡಿ ಹುಚ್ಚಪ್ಪಗಳಿರ ॥ ಪ ॥

ಸುಖವಾಗಿ ಬಾಳಲು ಸಾಕಷ್ಟು ಇದ್ದರು
ಮಣ್ಣು ಮುಕ್ಕಲು ಯಾಕಾತುರ ಪಡುವಿರಿ
ನಿಮ್ಮಯ ಮರುಳಿಂದ ಬುವಿಯ ಬಾಳನ್ನೆಲ್ಲ
ಬಲಿಕೊಡುತೀರಲ್ಲೊ ಓ ಖೋಡಿಗಳೆ ೧

ಬಾಂಬುಗಳೆಲ್ಲವ ಎಸೆಯಲು ತೆಕ್ಕೊಟ್ಟು
ತಾಳಿ ತಾಳಿ ಅಂದ್ರೆ ತಾಳುವರೆ
ಉರಿದು ಹೋಗುವ ಮುನ್ನ ಲೋಕವ ಸುಳಿಸಿರೊ
ಮಿದುಳನ್ನು ಸೀನೇಲಿ ಬಚ್ಚಿಡಬೇಡಿ ೨

ಏನು ಕಾರಣ ನಿಮ್ಮ ಮತಿಯು ಕೆಟ್ಟಂತಿದೆ
ಬಾಂಬು ಡಾಲರು ನಿಮ್ಮನುಳಿಸುವುವೆ
ಇನ್ನಾದರು ಕೊಂಚ ಯೋಚಿಸಿ ನೋಡಿರೊ
ಹಟಮಾರಿತನ ಬಿಟ್ಟು ಹುಚ್ಚನು ಕಳೆದು ೩

—ರಾಮಕೃಷ್ಣ.

—•—

ಡಾಕ್ಟರು:—ಮೆತ್ತಗೆ ಆ ಕುರ್ಚಿಮೇಲೆ ಬೇಡ ಈ ಬೆಂಚಿನಮೇಲೆ ಕೂಡಿ ಇದು ಮುರಿಯೋಲ್ಲ. ನಾಲಿಗೆ ತೆಗಿರಿ—ಹಾಂ—ಅಪಥ್ಯ ಮಾಡಿದ್ದೀರಿ ನಾನು ಹೇಳಿರಲಿಲ್ವೆ ಬರೀ ಹಣ್ಣಿನಮೇಲೆ ಇರಬೇಕೂಂತ—ಸಿಕ್ಕಾಪಟ್ಟೆ ತಿಂದುಬಿಟ್ಟಿದ್ದೀರ ಅಲ್ವೆ?

ಭೀಮನ್:—ನನಗೇನು ಅಷ್ಟು ತಿಳಿಯೋಲ್ವೆ ಸಾರ್ ಬರೀ ಹಣ್ಣೆ ನಾನು ತಿಂದದ್ದು.

ಡಾ॥:—ಎಷ್ಟು ತಿಂದ್ರಿ ?

ಭೀಮನ್:—ಕೇವಲ ಎರಡೇ ಎರಡು—ಹಲಸಿನ ಹಣ್ಣು.

# ಸಮಸ್ಯೆ

"ಅಮ್ಮಾ! ಅಮ್ಮಾ! ಯಾರೋ ಬಂದಿದಾರೆ!" ಸಾಮೂಹಿಕ ಗಾನದಂತೆ ಅಪಸ್ವರದಲ್ಲಿ ಅರಚುತ್ತಾ ಒಳಕ್ಕೆ ಬಂದುವು ನಮ್ಮ ಸಂತಾನ ಸಪ್ತವು. ಹಿಡಿದಿದ್ದ ಪುಸ್ತಕವನ್ನು ಹಿಂದಿಟ್ಟು, ಬಾಗಿಲಕಡೆ ನೋಡಿದೆ. ಕೂಲಿಂಗ್ ಗ್ಲಾಸು, ಕಾಶ್ಮೀರ್ ಸಿಲ್ಕ್ ಸೀರೆ, ಕನ್ನಡಿ ಕೆಲಸದ ಕೈಚೀಲ ಸಹಿತವಾಗಿ, 'ಸಿಂಗಾರ ಬಂಗಾರ'ವಾಗಿ ನಿಂತಿದ್ದಳು ಆಕೆ. ಪಾಪ, ಮಕ್ಕಳು ಬೆರಗಾದ್ದೇನಾಶ್ಚರ್ಯ! ಅವರಮ್ಮನ 'ವಿಜಿಟರ್ಸ್' ಎಂದರೆ, ಕಾಫೀಪುಡಿ ಸಾಲಕ್ಕೆ ಬರುವ ನೆರಮನೆ ನಾಗಮ್ಮ, ಮೊರದ ಎರವಲಿಗೆ ಬರುವ ಹೊರಮನೆ ಗೌರಕ್ಕ, ಸಕ್ಕರೆ ಸಾಲ ಹಿಂದಿರುಗಿಸಲು ನೆನಪು ಮಾಡಲು ಬರುವ ಸೀಬೇಮರದ ಕಾಂಪೌಂಡಿನ ಸಾವಿತ್ರಿಬಾಯಿ,....ಇಂಥವರೇ! ಹೀಗಿರುವಲ್ಲಿ ಈ ಒಂಭೈನೂರ ಐವತ್ತೈದನೇ 'ಮಾಡಲ್ಲ'ನ್ನು ನಮ್ಮ ಮನೇ ಬಾಗಿಲಿನಲ್ಲಿ ನೋಡಿ ಅವು ಬೆರಗಾದ್ದು ಸಹಜ ತಾನೇ?

ನಾನೂ ಬೆದರುತ್ತ, ಬೆವರುತ್ತ, ಬರಮಾಡಿದೆ ಆಕೇನ, 'ಬನ್ನೀಮ್ಮಾ ಒಳಕ್ಕೆ' ಅಂದೆ. ಆ 'ಒಳಕ್ಕೆ'ಯೋ ಹಳೇ ಸಾಮಾನಿನ ಹರವಿದಂಗಡಿಯಾಗಿತ್ತು, ಮನೆಯಲ್ಲಿರುವ ಒಂದು ಕುರ್ಚಿಗೂ ಕಾಲು ಊನವಾದ್ದರಿಂದ, ಹಾಕಲು ಧೈರ್ಯ ಬರದೆ, ಆಕೆಯನ್ನು ನಿಲ್ಲಿಸಿಕೊಂಡೇ ಮಾತನಾಡಿಸಬೇಕಾಯ್ತು.

ನಮ್ರತೆಯಿಂದ ನಮಸ್ಕರಿಸಿ, ನಯವಾಗಿ, ಹಿತವಾಗಿ, ಕೇಳಿದಳು ಆಕೆ— "ನೀವು 'ವಿಪ್' ಉಪಯೋಗಿಸುತಿದ್ದೀರಾಮ್ಮ? .. ಆ?....ಇಲ್ಲವೇ?....ಉಪಯೋಗಿಸಿಲ್ಲವೇ?........ಎಂದೂ ಉಪಯೋಗಿಸೇ ಇಲ್ಲವೇ? ...ತ್ಸು ತ್ಸು ತ್ಸು ತ್ಸು ...!" ಎಂದು ಸಿಂಪತೈಸಿದಳು ಸರಳೆ. "ಎಂಥಹ ಅನಾಹುತವಾಗಿದೆ ನಿಮ್ಮ ಜೀವನದಲ್ಲಿ!" ಎನ್ನುತ್ತಿತ್ತು ಆ ಧ್ವನಿಯ ಧಾಟಿ.

"ಕೊಳ್ಳಿ, ಈ ಸ್ಯಾಂಪಲ್ ಡಬ್ಬ ತೆಗೆದುಕೊಳ್ಳಿ ಇಂದಿನಿಂದಲೇ ಉಪಯೋಗಿಸಿ ನೋಡಿ. ನಿಮ್ಮ ಪಿಂಗಾಣಿ ಸಾಮಾನುಗಳಿಗೆ ಪ್ರಯೋಗಿಸಿ, ಫಳ ಫಳ ಗುಟ್ಟುವುವು; ನಿಮ್ಮ ಸ್ಟೈಯಿನ್‌ಲೆಸ್ ಸ್ಟೀಲ್ ಪಾತ್ರೆಗಳಿಗೆ ಬಳಸಿನೋಡಿ, ಮುಖ ನೋಡಿಕೊಳ್ಳುವಂತಾಗುತ್ತೆ; ನಿಮ್ಮ ಬಾತ್‌ರೂಮಿಗೂ ವಾಷ್‌ಬೇಸಿನ್‌ಗೂ ಬಳಿದುನೋಡಿ; ನಿಮ್ಮ ಬಾಗಿಲುಗಳ ಹಿತ್ತಾಳೆ ಹಿಡಿಗಳಿಗೆ ಹಾಕಿ, ಹೊನ್ನು ಹಿಡಿಗಳಾದಾವು! ಮನೆಯ ನೆಲಕ್ಕೆ ಹಾಕಿ; ಪಾಲೀಷ್ ಕಡಿಮೆಯಾಗಿರುವ ಮರದ ಕಿಟಕಿ ಬಾಗಿಲುಗಳನ್ನು,

ನಿಮ್ಮ ಫರ್ನೀಚರ್ ಸಾಮಾನನ್ನೂ ಸಹ ಮರೆತೀರಿ" ಎಂದೆಲ್ಲ ಅಂಗಲಾಚಿ, ನನ್ನ ಇದುವರೆಗಿನ ಮೂರ್ಖತೆಗೆ ಮರುಗಿ, ಡಬ್ಬಿಯನ್ನು ಕೈಗಿಟ್ಟು, 'ನಮಸ್ತೇ' ಮಾಡಿ ನಡೆದಳು ಆಕೆ.

ಆಕೆ ಹೊರಟುಹೋದ ನಂತರ ವಾಸ್ತವ ಪ್ರಪಂಚಕ್ಕಿಳಿದೆ. ಕೈಲಿದ್ದ ಡಬ್ಬಿಯ ಕಡೆ ನೋಡಿದೆ. ನೆಲಕ್ಕೆ ಪಾಲಿಷ್‌ಮಾಡಿ ಅಂದಳು ಆಕೆಯೇನೋ, ನಿಜ; ನಾವಿರುವುದು 'ಬಂಗಲೆ'ಯೇ ಆದರೂ ಅದರೊಡೆಯ ಅದನ್ನು ಹಂಚಿ ಹದಿನಾರುಭಾಗ ಮಾಡಿ, ಬಾಡಿಗೆಗೆ ಕೊಟ್ಟಿದಾನೆಂಬುದು ಆಕೆಗೆ ಹೇಗೆ ಗೊತ್ತಾಗಬೇಕು? ನಮ್ಮ ಪಾಲಿಗೆ ಬಂದಿರುವುದು ಬಂಗಲೆಯ ಉಗ್ರಾಣ, ಬಚ್ಚಲುಮನೆ, ಮತ್ತು ಹಸುವಿನ ಕೊಟ್ಟಿಗೆ. ಈ 'ಮೂರಂಕಣ'ದಲ್ಲೇ, ನಾವಿಬ್ಬರು, ನಮ್ಮ ಸಂತಾನ ಸಪ್ತವು, ಕೆಲಸದವಳು, ಹಾಲಿನವನು, ಸಾಲದವರು, ಎಲ್ಲರ ತಿರುಗಾಟವೂ. ಅಂದಮೇಲೆ ಜನಮೇಜಯರಾಯನ ಕಾಲದಲ್ಲಿ ಮನೆಯೊಡೆಯ ಹಾಕಿಸಿದ್ದ ಹೆಂಚಿನ ಬಿಲ್ಲೆಗಳು ಅಜ್ಞಾತವಾಸವನ್ನೇ ಕೈಗೊಂಡುಬಿಟ್ಟಿವೆ. ಇಂತಹ ನೆಲಕ್ಕೆ ಪಾಲಿಷ್ ಹೇಗೆ ಹಾಕಲಿ? ಸಂಸಾರದ ರಥಹೂಡಿದ ಹೊಸದರಲ್ಲಿ, ಹುಮ್ಮಸ್ಸಿನಲ್ಲಿ, ನಾವೂ ನಾಲ್ಕಾರು ಪಿಂಗಾಣಿ ಸಾಮಾನುಗಳನ್ನೇನೋ ತೆಗೆದಿದ್ದುಂಟು. ಈಗ ಅವುಗಳ ಪೈಕಿ ಉಳಿದಿರುವುದು, ಬಿರುಕು ಬಿಟ್ಟಿರುವ ಮೂರು ತಟ್ಟೆಗಳು, ಹಿಡಿಮುರಿದ ಎರಡು ಕಪ್ಪುಗಳು, ಅವಕ್ಕೆ 'ವಿಮ್' ಬೇಡವೇ?

ಸ್ಟೈಯಿನ್‌ಲೆಸ್ ಸ್ಟೀಲ್ ಪಾತ್ರೆಗಳೇನೋ ಹಳೇಬಟ್ಟೆ, ಹರಕುಸೀರೆ ಹಾಕಿ ನಾಲ್ಕೈದು ತೆಗೆದಿದ್ದೇನೆ. ನಮ್ಮ ಕೆಲಸದವಳು ಅವನ್ನು ತೊಳೆಯುವಾಗ ಧಾರಾಳವಾಗಿ ಭೂಮಾತೆಯನ್ನು ಬಳಸಿ, ಅವುಗಳಮೇಲೆ ಎಲ್ಲಾ ಖಂಡಗಳು ಭೂಪಟಗಳನ್ನೂ ಕೆರೆದಿದ್ದಾಳೆ. ಇವಕ್ಕೆ ಪಾಲಿಷ್ ಯಾವ ಮುಖಕ್ಕೆ?

ಮನೆಯಲ್ಲಿರುವ 'ಫರ್ನೀಚರ್' ಎಂದರೆ, ಕುಂಟುಗಾಲಿನ ಕುರ್ಚಿ, 'ಇವರ' ಅಪ್ಪನ ಕಾಲದ್ದೊಂದು ಚಪ್ಪರಗಾಲು ಮಂಚ, ವಂಶಪಾರಂಪರ್ಯವಾಗಿ ಪೂಜೆ ಮಾಡಿಸಿಕೊಂಡು, ಗಂಧಾಕ್ಷತೆ ಮೆತ್ತಿಸಿಕೊಂಡಿರುವ ದೇವರ ಮಂಟಪ. ಇವು 'ವಿಮ್' ಕೇಳುವುದಿಲ್ಲವೇ?

ಕಡಿಮೆ ಪಾಲಿಷ್ ಇರುವ ಕಿಟಕಿ ಬಾಗಿಲುಗಳಿಗೆ ಉಪಯೋಗಿಸಬೇಕಂತೆ. ಪಾಲಿಷ್ ಹಾಕಿದ್ದರೆ ತಾನೇ ಅವುಗಳ ಪಾಲಿಷ್ ಕಡಿಮೆಯಾಗುವುದು? ಸಾಲದಕ್ಕೆ, ಇರುವ ಮೂರು ಕಿಟಕಿಗಳಲ್ಲಿ ಎರಡಕ್ಕೆ ಕಿಟಕಿ ಬಾಗಿಲುಗಳೇ ಇಲ್ಲ! ಇನ್ನು ಬಾತ್ ರೂಮು ವಾಷ್‌ಬೇಸಿನ್ನು, ಹಿತ್ತಾಳೆ ಹಿಡಿಗಳ ಪ್ರಶ್ನೆ ಏಳುವ ಸಂಭವವಂತೂ ಇಲ್ಲವೇ ಇಲ್ಲ!

ಅಂತೂ ಪಾಪ, ಆ ಹಳೆದೀಡಬ್ಬ, ಬಾಗಿಲ ಗೂಡಿನಲ್ಲಿ ತಪಸ್ಸು ಮಾಡುತ್ತಿದೆ. "ಕೊಡೇ ನನ್ನ ಸೈಕಲ್‌ಗೆ ಸವರುತ್ತೇನೆ, ಪಾಪ ಆಕೆ ಅಷ್ಟು ಪ್ರೀತಿಯಿಂದ ಕೊಟ್ಟು ಹೋಗಿದಾರೆ" ಅನ್ನುತ್ತಿದ್ದಾರೆ 'ಇವರು'. "ಏನೂ ಬೇಡವಮ್ಮ, ನನ್ನ ಇನ್‌ಸ್ಟ್ರುಮೆಂಟ್ ಬಾಕ್ಸಿಗೆ ಹಚ್ಚುತ್ತೇನೆ. ಹೈಸ್ಕೂಲಿನಲ್ಲಿ ಆರು ವರ್ಷ ನನ್ನ ಸರ್ವೀಸ್ ಮಾಡಿ ಹಳೇದಾಗಿ ಬಿಟ್ಟಿದೆ" ಎನ್ನುತ್ತಾನೆ ಮಗಮಾಣಿಕ್ಯ. "ಹೂವಿನ ಕಾಗದ ಅಂಟಿಸುಕ್ಕೆ ಗೋಂದು ನೆನೇ ಹಾಕಬೇಕು. ಡಬ್ಬ ಖಾಲಿಮಾಡಿಕೊಳ್ಳುತ್ತೀನಮ್ಮ" ಅನ್ನುತ್ತಿದ್ದಾಳೆ ಆರನೇ ಹುಡುಗಿ.

ಅಂತೂ ಆ ಹಳೆದೀಡಬ್ಬಿಯ ಭವಿಷ್ಯ ಇನ್ನು ಸಮಸ್ಯೆಯಾಗಿಯೇ ಉಳಿದಿದೆ!

—ಸುನಂದಮ್ಮ.

---

## ಇಂದಿನ ಗಾದೆಗಳು

ತಾಳಿದವಳಿಗೆ ತಾಳಿಯೇ ನಾಸ್ತಿ
ಹಿಂದಿ ಕಲಿಯದೆ, ಮಂದಿ ಎನಿಸಿಕೊಂಡರು
ಉಂಡಬಾಯಿಗೆ ಬೈಗುಳೇ ಒಗ್ಗರಣೆ
ಮೂರು ಕೋರ್ಟು ಹತ್ತಿ ಮೂರು ನಾಮ ಮೆತ್ತಿಸಿಕೊಂಡ
ಅಸಡ್ಡಾಳನ ಆಸ್ತಿ ಎಲ್ಲ ಅಡ್ವೊಕೇಟರ ಪಾಲು
ಕೆಟ್ಟ ನಕ್ಷತ್ರದಲ್ಲಿ ಸಾಯಬಾರದಲ್ಲಾ ಅಂತ ಡಾಕ್ಟರನ್ನು ಕರೆಸಿದರೆ,
ಆತನನ್ನು ಕಾಣುತ್ತಲೂ ಆಸಾಮಿ ಬದುಕೇ ಬಿಟ್ಟ.
ಲೇ ಅಂತ ಅವಳನ್ನ ಕರೆಯುವುದಕ್ಕೆ ಮೊದಲೇ,
ಲೋ ಅಂತ ಅವಳೇ ಪ್ರಾರಂಭಿಸಿಬಿಟ್ಟಳು.
ಸಿನಿಮ-ತಾರೆ ಪುರಾಣ ಊರಿಗೆಲ್ಲ ಪ್ರಾಣ.
ಇಲ್ಲದ ಗಣೇಶನಿಗೆ ಬೆಲ್ಲದ ನೈವೇದ್ಯ;
ಇರೋ ಗಣೇಶನಿಗೆ ಇರೋದರಲ್ಲೇ ನೈವೇದ್ಯ.
ಹೊಳೆ ದಾಟಿದ ಮೇಲೆ, ಅಂಬಿಗ ಬಿಲ್ ಕಳಿಸಿದ
ಹತ್ತು ಮಕ್ಕಳ ಜನಕೆ, ಇನ್ನೆಲ್ಲಿಯ ನರಕ?
"ಪಿಲ್" ನುಂಗಿ ಸಾಯದವ, 'ಬಿಲ್' ನುಂಗಿ ಸತ್ತಾನೆ?
ಹಿಗ್ಗುವುದೂ ಬೇಡ, ತಗ್ಗುವುದೂ ಬೇಡ, ಮಗ್ಗದ ಸೀರೆಯೇ ಸಾಕು.
ಮೊದಲೇ, ಆನೆಗಳನ್ನು ಕೊಳ್ಳುವವರಿಲ್ಲ; ಗಜೇಂದ್ರನಿಗೆ ಬೇರೆ ಮೋಕ್ಷ.

—ಪಾಟೀಲಿ.

# ನಗರಸೇವಾ ಕಾರ್ಯಕ್ರಮ

ಅಖಿಲ ಕರ್ನಾಟಕ ಗ್ರಾಮ ಮಹಾಜನ ಸಭೆಯ ಸ್ವಯಂ ಸೇವಕ ದಳ ಬೆಂಗಳೂರು ನಗರೋದ್ಧಾರಕ್ಕಾಗಿ ಕೈಕೊಳ್ಳಬೇಕೆಂದಿರುವ ಸೇವಾ ಕಾರ್ಯಕ್ರಮದ ಮುಖ್ಯ ವಿವರಗಳು ಹೀಗಿವೆ:—

(೧) ಬೆಂಗಳೂರು ನಾಗರಿಕರು ವರಮಾನವನ್ನು ಲೆಕ್ಕಿಸದೆ, ಹೋಟಲುಗಳಲ್ಲೂ ಸಿನಿಮಾಗಳಲ್ಲೂ ಕಾಲ ಕಳೆಯುತ್ತ ಅಪಾರ ಹಣ ವೆಚ್ಚಮಾಡುತ್ತ, ಸಾಲ ಪೀಡಿತರಾಗಿ ಬಳಲುವುದರಿಂದ, ಗ್ರಾಮ ಜೀವನದ ಸರಳತೆಯನ್ನೂ ನೀರಸತೆಯನ್ನೂ ನೀರವತೆಯನ್ನೂ, ಅವರಿಗೆ ಮನದಟ್ಟುಮಾಡಿಸಲು, ಪ್ರತಿ ಮೊಹಲ್ಲಾದಲ್ಲೂ ಸಭೆ ಮೆರವಣಿಗೆಗಳನ್ನೇರ್ಪಡಿಸಿ, ಮಹಿಳೆಯರು ತಮ್ಮ ಪತೀ ಪುತ್ರರನ್ನು ಹತೋಟಿಯಲ್ಲಿರಿಸುವಂತೆ, ಕೇಳಿಕೊಳ್ಳುವುದು.

(೨) ಆಸ್ಪತ್ರೆಗಳಿಲ್ಲದಿರುವುದು, ಇದ್ದರೂ ಡಾಕ್ಟರುಗಳಿಲ್ಲದಿರುವುದು, ಇದ್ದರೂ, ಔಷಧಿ ಸಾಮಗ್ರಿಗಳಿಲ್ಲದಿರುವುದು, ಇತ್ಯಾದಿ ಅನುಕೂಲಗಳಿಂದ ಗ್ರಾಮಸ್ಥರು ಆರೋಗ್ಯಪಾಲನೆ ಮಾಡಿಕೊಳ್ಳುತ್ತಿರುವುದನ್ನು ಬೆಂಗಳೂರಿಗರಿಗೆ ತಿಳಿಸಿ, ಅವರು ಈಗ ಗಳಿಗೆ ಗಳಿಗೆಗೂ ನುಂಗುತ್ತಿರುವ ಗುಳಿಗೆಗಳ, ಬೆಳಗ್ಗೆ ಸಂಜೆ ಬಳಸುತ್ತಿರುವ ಬಾಟ್ಲೆಗಳ, ಸೂಜಿಗಳ ವಿರುದ್ಧ ಪ್ರಚಾರ ನಡೆಸುವುದು.

(೩) ಬೆಂಗಳೂರಿನ ಹುಡುಗರು ಹಳ್ಳಿಗಳಿಗೆ ನುಗ್ಗಿ, ಹಳ್ಳ ಮುಚ್ಚಿ, ಗೋಡೆ ಕೆಡವಿ, ಮೋರಿ ತೋಡಿ ಮಣ್ಣೆರಚುವುದಕ್ಕೆ ಪ್ರತಿಯಾಗಿ, ಗ್ರಾಮಸ್ಥರು ಬೆಂಗಳೂರಿಗೆ ನುಗ್ಗಿ, ಅವೆನ್ಯೂ ರೋಡಿನಲ್ಲಿ ಅವೆನ್ಯು ಮರ ಬೆಳೆಸಿ; ಸಂಪಂಗಿ ಟ್ಯಾಂಕನ್ನು ದುರಸ್ತು ಮಾಡಿ ನೀರು ತುಂಬಿಸಿ; ಬುಲ್ಲು ಟೆಂಪಲ್ಲೂ ರೋಡು ಎಂಬ ಬೋರ್ಡನ್ನು ಬಸವನಗುಡಿ ರಸ್ತೆ, ಹೆಚಿಬಿ ಸಮಾಜ ರೋಡು ಎಂಬ ಬೋರ್ಡನ್ನು ಹಗಲು ಭಜನೆ ಸಮಾಜದ ರಸ್ತೆ, ಎಂದೆಲ್ಲ ಉದ್ದಕ್ಕೂ ಬದಲಾಯಿಸಿ; ದನ ಕರ ಕಟ್ಟಿಕೊಂಡಿರುವ ಬೆಂಗಳೂರಿಗರಿಗೆ ಅವನ್ನು ಸಾಕುವ ವಿಧಾನವನ್ನು ತಿಳಿಸಿ; ನಿತ್ಯಸ್ನಾನದ ದುರಭ್ಯಾಸದಿಂದ ಮಾನವನ ಚರ್ಮಕ್ಕಾಗುತ್ತಿರುವ ಅನಾಹುತಗಳನ್ನು ಆಧುನಿಕ

ವಿಜ್ಞಾನ ಶಾಸ್ತ್ರಿಗಳ ಅಭಿಪ್ರಾಯಗಳೊಂದಿಗೆ ವಿವರಿಸಿ; ಕಾಲೇಜು ವಿದ್ಯಾರ್ಥಿಗಳಿಗೂ ಪ್ರೊಫೆಸರುಗಳಿಗೂ ಕೋಲಾಟ, ಡೊಂಬರ ಕುಣಿತ, ರಾಗಿ ಬೀಸುವ ವಿಧಾನ, ನೀರು ಸೇದುವ ರೀತಿ, ಪಾತಾಳ ಗರಡಿಯ ಪ್ರಯೋಗ, ನೇಗಿಲ ಯೋಗಾಭ್ಯಾಸ ಮುಂತಾದ ಮನರಂಜಕ ಹಾಗೂ ಔಪಯೋಗಿಕ ವಿಧಾನಗಳನ್ನು ಕಲಿಸಿ,....... ಜನಜೀವನದಲ್ಲಿ ಸಮತೆಯನ್ನು ಸಾಧಿಸುವುದು.

(೪) ಬೆಂಗಳೂರಿಗರು ಉಡಿಗೆ ತೊಡಿಗೆಗಳಲ್ಲಿ ಕಾಲುಚೀಲ, ಕೈಚೀಲ, ಬನೀನು, ಷರಟು, ವೇಸ್ಟು ಕೋಟು, ಓವರ್ ಕೋಟು, ನಿಕ್ಕರು, ಷರಾಯಿ ಇತ್ಯಾದಿ ಈರುಳ್ಳಿತ್ವವನ್ನನುಕರಿಸಿ, ಬಟ್ಟೆ ಮೇಲೆ ಬಟ್ಟೆ ಧರಿಸಿ, ಸೂರ್ಯನಾರಾಯಣನನ್ನು ದೂರಮಾಡುತ್ತಿರುವುದರಿಂದಾಗುತ್ತಿರುವ ಅನಾಹುತವನ್ನು ತಪ್ಪಿಸಿ, ಚಳಿಗಾಲದಲ್ಲಿ ಕಂಬಳಿ ಹೊದ್ದುಕೊಳ್ಳುವುದು (ಅದನ್ನು ಕೋಟು ಷರಾಯಿಯಂತೆ ಹೊಲೆದು ಮಾರ್ಪಡಿಸದೆ), ಬಿಸಿಲು ಕಾಲದಲ್ಲಿ ದುಪಟಿ ಹೊದ್ದುಕೊಳ್ಳುವುದು, ಅದೇ ಸರಿ, ಎಂದು ಎನಿಸುವುದು.

(೫) ಅಚ್ಚುಕನ್ನಡದ ಅನೇಕ ಮಾತುಗಳು ಬೆಂಗಳೂರಿಗರಿಗೆ ಮರೆತುಹೋಗಿವೆ; ಅವಷ್ಟೇ ಜೀವಕಳೆ ತುಂಬಿದ, ಪರಿಣಾಮಕಾರಿಯಾದ, ಪದಗಳು ಪಠ್ಯಪುಸ್ತಕಗಳಲ್ಲಿಲ್ಲ. ಆದ್ದರಿಂದ, ಗ್ರಾಮ್ಯ ಎಂದು ಈಗ ಮಡಿವಂತರು ಬಹಿಷ್ಕರಿಸಿರುವ ಸಿಡಿನುಡಿ, ಕಿಡಿನುಡಿ, ಪುಡಿನುಡಿಗಳನ್ನು ಪ್ರಚಾರ ಮಾಡುವುದು.

(೬) ಈಗ, ಗ್ರಾಮಗಳಿಗೂ ನಗರಗಳಿಗೂ ಇರುವ ವ್ಯತ್ಯಾಸವನ್ನು ಇತರ ಎಲ್ಲಾ ವಿಧಗಳಿಂದಲೂ ನಿರ್ಮೂಲಗೊಳಿಸುವುದು.

—ರೇವಣ್ಣ.

---

ಸೋಮ್:—ಅಯ್ಯಾ, ಬಿಡಿಯಾದ ಒಂದೇ ಕೂದಲಿದ್ದ ನಿನ್ನ ಮರುಭೂಮಿಯಂಥಾ ತಲೆ ಹೇಗೆ ಮಲೆನಾಡಿನಂತೆ ರೋಮಭರಿತವಾಯಿತು – ಏನು ಉಪಯೋಗಿಸುತ್ತೀ ?

ರಾಮ್ :— ಟೋಫನ್.

# ಕೃತವರ್ಮನ ವಿಷನಿಮಿಷಗಳು

ಭಾರತದ ಕೃತವರ್ಮ ಕುರುಕ್ಷೇತ್ರದ ಕದನದ ಕೊನೆತನಕ ಇದ್ದು ಕಾಣಬಾರದ್ದೆಲ್ಲ ಕಂಡ. ಅಂದೊಮ್ಮೆ ಶಾಲಾವರ್ಧಂತಿಯ ದಿನದ ನಾಟಕಕ್ಕಾಗಿ ಕೃತವರ್ಮನ ಪಾತ್ರವಹಿಸಬೇಕಾಗಿದ್ದ ನಮ್ಮ ಶ್ರೀಪಾದು ಒಂದೆರಡು ಘಂಟೆಗಳಲ್ಲಿ ಅನುಭವಿಸಿದ್ದನ್ನು ಆ ಕೃತವರ್ಮ ಎಂದೂ ಅನುಭವಿಸಿರಲಾರ.

ಮಿಡಲ್‌ಸ್ಕೂಲ್ ಮೂರನೇ ಇಯತ್ತೆ; ಚೆಲುವಯ್ಯನವರ ಚರಿತ್ರೆಯ ಪಾಠ ನಡೆಯುತ್ತಿದೆ. ಮೈಸೂರು ಯುದ್ಧ; ಕೊನೆಯದು. ಶ್ರೀರಂಗಪಟ್ಟಣದ ಮುತ್ತಿಗೆಯ ಪ್ರಸಂಗ. ಢಂ ಢಂ ಢಂ ಎಂದು ಗುಂಡುಗಳು ಹಾರಿದ್ದನ್ನು, ಆಕಾರದಲ್ಲಿ ಹೊಗೆ ತುಂಬಿಕೊಂಡಿದ್ದನ್ನೂ ಚೆಲುವಯ್ಯನವರು ಪ್ರತ್ಯಕ್ಷ ಕಂಡವರಂತೆ ವರ್ಣಿಸುತ್ತಿದ್ದಾರೆ. ಇಂಥ ಸಮಯದಲ್ಲಿ ಇದ್ದಕ್ಕಿದ್ದ ಹಾಗೆ ತರಗತಿಯ ಒಂದು ಮೂಲೆಯಲ್ಲಿ ಹೊಗೆಯ ಸುರುಳಿಯೊಂದು ಪ್ರತ್ಯಕ್ಷವಾಗಿ, ನಿಧಾನವಾಗಿ ಮೇಲೇರತೊಡಗಿತು. ಅದು ಚೆಲುವಯ್ಯನವರ ಕಣ್ಣಿಗೆ ಬಿತ್ತು. ಮೈಸೂರು ಯುದ್ಧದಲ್ಲಿ ಮೈಮರೆತಿದ್ದ ಅವರಿಗೆ ಮತ್ತೆ ತರಗತಿಯ ವಾತಾವರಣಕ್ಕೆ ಹೊಂದಿಕೊಳ್ಳಲು ಒಂದು ಕ್ಷಣ ಬೇಕಾಯಿತು. ಅಷ್ಟರಲ್ಲಿ ಹೊಗೆಯ ಸುರುಳಿ ಸೂರನ್ನು ತಲಪಿತು. ಆಗ ಚೆಲುವಯ್ಯನವರು "you ಢಡಿಯ stand up"—ಎಂದರು. 'ಢಡಿಯ' ಅಂದರೆ ಮೂಲೆ ಹಿಡಿದು ಕುಳಿತ ಮುಕ್ಕಣ್ಣ. ಅವನಿದ್ದಲ್ಲಿಂದಲೇ ಹೊಗೆಯ ಸುರುಳಿ ಮೇಲೇರಿದ್ದು.

ಚಲುವಯ್ಯನವರ ಆಜ್ಞೆಯ ಪ್ರಕಾರ ಮುಕ್ಕಣ್ಣ ಎದ್ದು ನಿಲ್ಲುವುದರಲ್ಲಿದ್ದ. ಆದರೆ ಹಾಗೆ ನಿಲ್ಲುವ ಮೊದಲು ಆತ ಯಾಕೋ ಕೊಂಚ ಬಗ್ಗಿದ. ಆಗ ಥಟ್ಟನೆ ಚೀರಿಕೊಂಡ ಸ್ವರವೊಂದು ಅವನ ಪಕ್ಕದಿಂದ ಹೊರಟಿತು. ಚೆಲುವಯ್ಯನವರು ಹತ್ತಿರ ಬಂದು ನೋಡಿದರು. ಅರೆ, ಮುಕ್ಕಣ್ಣನ ಪಕ್ಕದಲ್ಲಿ ಕಿರಿಚಿದ್ದು? ಶ್ರೀಪಾದುವೆ? ಹೌದು! "ಬೆಂಚಿನಮೇಲೆ ನಿಲ್ಲು ಮರಿ, ಯಾಕೆ ಹಾಗೆ ಕಿರಿಚಿದೆ ಹೇಳು"—ಎಂದು ಛಳಿ ಹಿಡಿಸುವ ಒಂದು ವಿಶಿಷ್ಟ ನಯಗಾರಿಕೆಯಿಂದ ಕೇಳಿದರು ಚೆಲುವಯ್ಯನವರು.

ಶ್ರೀಪಾದು ಒಂದೇ ಸಮನೆ ಉಗುಳು ನುಂಗುತ್ತಿದ್ದ, ಇತ್ತ ಕಾಲು ಬೇರೆ ಸವರಿಕೊಳ್ಳುತ್ತಿದ್ದ.

"ಏನಾಗಿದೆ ಮರಿ, ಕಾಲಿಗೆ? ತುರಿಸುತ್ತಿ ಅಲ್ವೆ? ಎಂದು ಕೇಳಿದರು ಮೇಷ್ಟರು.

"ಉಂ.... ಉಂ.... ಏನಿಲ್ಲ ಸಾರ್"— ಎಂದು ತೊದಲಿದ ಶ್ರೀಪಾದು. ಮೇಷ್ಟರು ಗದರಿಸಿದೊಡನೆ ಮುಕ್ಕಣ್ಣ ಕೈಯಲ್ಲಿದ್ದ ಸಿಗರೇಟಿನ ಬೆಂಕಿಯನ್ನು ತನ್ನ ಕಾಲಿಗೆ ತೀಡಿ ಆರಿಸಿದ ವಿಚಾರವನ್ನು ಹೇಳಿಬಿಡಬಹುದಿತ್ತು. ಆದರೆ ಹಾಗೆ ಹೇಳುವುದು ಸರಿಯೆ? ಈ ಕಡೆ ಮುಕ್ಕಣ್ಣ ಕೆಕ್ಕರಿಸಿ ತನ್ನನ್ನೇ ನೋಡುತ್ತಿದ್ದಾನೆ, ತಿಂದುಬಿಡುವ ಹಾಗೆ. ಪಾಠ ಮುಗಿದಮೇಲೆ ಆತನಿಂದ ರಕ್ಷಿಸಲು ಯಾರು ಬರುತ್ತಾರೋ, ಆದ್ದರಿಂದ ಅತ್ತ ಕಾಲಿನ ಉರಿಯನ್ನೂ ಇತ್ತ ಮೇಷ್ಟರ ಆವಾಹನೆಯನ್ನೂ ನುಂಗಿಕೊಳ್ಳುತ್ತಾ ಶ್ರೀಪಾದು ಮುಂದಿರುವ ತಾಡನಕ್ಕೆ ಸಿದ್ಧನಾಗಬೇಕಾಯಿತು.

ಅಷ್ಟರಲ್ಲಿ ಚಲುವಯ್ಯನವರಿಗೂ ಪರಿಸ್ಥಿತಿ ಅರ್ಥವಾಗಿಬಿಟ್ಟಿತ್ತು. ಅವರು ಮುಕ್ಕಣ್ಣನನ್ನು ಸಮೀಪಿಸಿದಾಗ ಆತ ಕಾಲು ಬೆರಳುಗಳ ಅಡಿಯಲ್ಲಿ ಸಿಗರೇಟಿನ ಮೊಂಡನ್ನು ಅಡಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದುದನ್ನು ಅವರು ಗಮನಿಸಿದರು. ಆದರೆ ಮಾತಾಡಿ ಪ್ರಯೋಜನವಿಲ್ಲ. ಎರಡು ಹೇರುವುದರಿಂದಲೂ ಸುಖವಿಲ್ಲ. ಮುಕ್ಕಣ್ಣನನ್ನು ಬಡಿಯುವುದಕ್ಕಿಂತ ಗೋಕುಲಾಷ್ಟಮಿ ಉಂಡೆಯನ್ನು ಗುದ್ದುವುದೇ ಲೇಸು. ಅದಾದರೂ ಹದಕ್ಕೆ ಬಂದೀತು. ಮುಕ್ಕಣ್ಣನೋ "ಓ ಇಲ್ಲಿ ಗುದ್ದಿ ಸಾರ್"— ಎಂದು ಜಾಗ ತೋರಿಸಿಕೊಡುತ್ತಾನೆ. ಆದ್ದರಿಂದ ಚಲುವಯ್ಯನವರು ಹಾಗೇನೂ ಮಾಡದೆ ಅವನ ಕಿಸೆಗಳನ್ನು ಶೋಧಿಸತೊಡಗಿದರು. ಅವನ ಪೈಜಾಮುದ ಕಿಸೆ ಯಲ್ಲಿಯೇ ಅವರು ನಿರೀಕ್ಷಿಸಿದ ವಸ್ತು ಸಿಕ್ಕಿತು. ಸರಕ್ಕನೆ ಅದನ್ನು ತೆಗೆದು ತಮ್ಮ ಕೋಟಿನ ಕಿಸೆಯಲ್ಲಿ ತುರುಕಿಕೊಂಡರು. ಅನಂತರ ಸದ್ದಿಲ್ಲದೆ ಅವನ ಕತ್ತಿಗೆ ಕೈಕೊಟ್ಟು ಬಾಗಿಲಿಂದ ಹೊರಗೆ ದಾಟಿಸಿ ಬಂದರು. ಮುಕ್ಕಣ್ಣನಿಗೆ ಈ ಬಗೆಯ ಉತ್ಸವ ಪ್ರತಿದಿನದ ವಿಷಯ.

ಅನಂತರ ಮೇಷ್ಟರು ಶ್ರೀಪಾದುವಿನ ಕಿವಿಹಿಂಡಿದರು. ಆತ ಕಿರಿಚಿದ್ದಕ್ಕಲ್ಲ ಕಿರಿಚಿಸದ್ದರ ಕಾರಣ ಅವರಿಗೆ ತಿಳಿದುಹೋಗಿತ್ತೆಂದೆನಲ್ಲ. ಮುಂದಿನ ಬೆಂಚಿನಲ್ಲಿರ ಬೇಕಾದವನು ಈ ಮೂಲೆ ಮುಕ್ಕಣ್ಣನ ಜೊತೆ ಯಾಕೋ ಹಿಡಿದೆ? ಎಂಬುದೇ ಅವರ ಪ್ರಶ್ನೆ. ಶ್ರೀಪಾದು ತಾನೇ ಏನು ಹೇಳಿಯಾನು. ನಾಟಕದ ಕೃತವರ್ಮನ ಮಾತುಗಳನ್ನು ಗಟ್ಟಿಮಾಡಿಕೊಳ್ಳಲು ಅನುಕೂಲವೆಂದು ಇಲ್ಲಿಗೆ ಬಂದೆ ಎನ್ನಬಹುದೆ? ಹಾಗೆ ಸತ್ಯ ಹೇಳಿದರೆ ಪರಿಣಾಮವೇನಾದೀತು? ಆದ್ದರಿಂದ ಅವಶ್ಯ ಮನು ಭೋಕ್ತವ್ಯಂ ಎಂಬಂತೆ ಸಿದ್ಧನಾಗಿ ನಿಂತ ಶ್ರೀಪಾದು. ಚಲುವಯ್ಯನವರು ಹೆಚ್ಚೇನೂ ಮಾಡದೆ ಈ ಮೂರೂವರೆ ಅಡಿಯ ಮರಿಯನ್ನು ಕಿವಿಹಿಡಿದೇ ಅವನ ಸ್ಥಾನಕ್ಕೆ ಎಳೆದೊಯ್ದು ಅಲ್ಲಿ ಬೆಂಚಿನಮೇಲೆ ನಿಲ್ಲಿಸಿದರು. ಶ್ರೀಪಾದ ಕೆಂಪು ಕೆಂಪಾಗಿ ಒಮ್ಮೆ ಬಲಗಾಲು ತೀಡಿಕೊಂಡ. ಚಲುವಯ್ಯನವರು ಪಾಠ ಮುಂದುವರಿಸಿದರು.

ಇಂಗ್ಲೀಸ್ ಸೀಪಾಯೀ, ಸತ್ತುಬಿದ್ದ ಸುಲ್ತಾನನ ಕತ್ತಿಯ ಮೇಲೆ ಕಣ್ಣುಹಾಕುವ ಹೊತ್ತಿಗೆ ಗಂಟೆ ಬಾರಿಸಿತು. ಪಾಠ ಮುಗಿಯಿತು.

ಮುಂದಿನದು ಆಟಗಳ ಪೀರಿಯೆಡ್. ಹುಡುಗರೆಲ್ಲಾ ಶ್ರೀಪಾದುವನ್ನು ಗೋಳು ಹುಯ್ದುಕೊಳ್ಳುತ್ತಾ ಆಟದ ಬಯಲಿಗೆ ನಡೆದರು. "ತಮಾಷಿ ಕಣೋ ನಿಮಗೆ, ಕಾಲಲ್ಲಿ ಬೊಕ್ಕೆ ಹೆಂಗೆದ್ದಿದೆ ನೋಡಿ, ಬಿಡಿ.ಗಾಸ್ನಷ್ಟಗಲ"– ಎನ್ನುತ್ತಾ ಶ್ರೀಪಾದು ಅತ್ತೇ ಬಿಡುವುದರಲ್ಲಿದ್ದ. ಆದರೂ "ಮುಕ್ಕಣ್ಣ ನಾಳೇನೇ ಸಾಯಲಿ" ಎಂದು ಶಪಿಸಿದ, ಜೊತೆಯ ಹುಡುಗರಲ್ಲಿ ಕೆಲವರಾದರೂ ಸಂತಾಪ ಸೂಚಿಸಿದರು. ಹಾಗೆ ಸಹತಪಿಸಿ ದವರಲ್ಲಿ ಮುಕ್ಕಣ್ಣನೂ ಒಬ್ಬ. ಕಡಲೇಕಾಯಿ ತಿನ್ನುತ್ತಿದ್ದ ಆತ ಶ್ರೀಪಾದುವನ್ನು ಸಮೀಪಿಸಿ" ಲೋ ಪಿಲ್ಟು, ಐಯಾಮ್ ಸಾರಿ ಐಯಾಮ್ ಸಾರಿ . ಇಗೋ ಕಡಲೆ ಕಾಯಿ ತಿನ್ನು....ಸಾಯಂಕಾಲ ದೋಸೆ ಕೊಡಸ್ತೀನಿ....ರೇಗ್ಬೇಡವೋ ನಾನೇನು ಬೇಕಂತ ನಿನ್ನ ಕಾಲಿಗೆ ಬೆಂಕಿ ಇಟ್ಟೆ ಅಂತ ತಿಳಕೊಂಡೆಯಾ...ಗೋಡೆ ಅಂತ ಗೀರಿದೆ ಕಣೋ"—ಎಂದೆಲ್ಲಾ ಸಾಂತ್ವನಕ್ಕೆ ಪ್ರಯತ್ನಿಸಿದ. ಆಗಲಂತೂ ಶ್ರೀಪಾದು ವಿನ ರೋಷ ಇಮ್ಮಡಿಯಾಗಿ ಅಳು ಉಕ್ಕಿಬಂತು. ಆತ ಕೈಯಾಡಿಸಿ ಮುಕ್ಕಣ್ಣ ಕೊಡಬಂದ ಕಡಲೆಕಾಯಿಗಳನ್ನು ಚೆಲ್ಲಾಡಿ ಹೆಬ್ಬುಲಿಯಂತೆ ಎಗರಿಬಿದ್ದ. ಆಗ ಮುಕ್ಕಣ್ಣ ಅವನ ತಲೆಕುಕ್ಕಿ ಹೊರಟುಹೋದ.

ಶ್ರೀಪಾದು ತನ್ನ ಪರಾಭವವನ್ನು ತಡೆದುಕೊಳ್ಳಲಾಗದೆ ತಲೆನೋವಿನ ನೆಪ ವೊಡ್ಡಿ ಆಟದಿಂದ ತಪ್ಪಿಸಿಕೊಂಡು ಸ್ಕೂಲಿಗೆ ಹೊರಟುಬಂದ. ಹಾಗೆ ಹಿಂದಿರುಗು ವಾಗ ಅವನಿಗೊಂದು ಯೋಚನೆ ಬಂತು. ನಾಟಕಕ್ಕೆ ಇರುವುದು ಇನ್ನು ಎರಡೇ ದಿನಗಳು, ಆದ್ದರಿಂದ ಈವಾಗಲಾದರೂ ಮಾತುಗಳನ್ನೆಲ್ಲ ಗಟ್ಟಿಮಾಡಿಕೊಳ್ಳಬೇಕು ಎಂದುಕೊಂಡ. ಹೇಗೂ ಕ್ಲಾಸ್ ರೂಮು ಖಾಲಿಯಾಗಿರುತ್ತದೆ. ಈಗಲೇ ಪ್ರಾರಂ ಭಿಸಿಬಿಡೋಣ ಎಂದುಕೊಂಡ. ನಾಟಕದಲ್ಲಿ ತಾನು ಪಾತ್ರವಹಿಸಿಕೊಳ್ಳುವುದನ್ನು ನೆನೆಸಿ ಅವನಿಗೆ ಕೊಂಚ ಹುಮ್ಮಸ್ಸು ಬಂತು. ಬೇಗನೆ ತನ್ನ ಕ್ಲಾಸ್ ರೂಮಿಗೆ ಹೋಗಿ ಹಾವಭಾವಗಳೊಡನೆ ರಿಹರ್ಸಲ್ಲಿಗೆ ತೊಡಗಿದ.

ಅಶ್ವತ್ಥಾಮ ರಾತ್ರಿಯಹೊತ್ತು ಪಾಂಡವರ ಪಾಳಯವನ್ನು ಹೊಕ್ಕು ಪಾಂಚಾಲರನ್ನು ಕೊಂದುಬಂದಿದ್ದಾನೆ. ಕೃತವರ್ಮ ಅವನ ಕೃತ್ಯವನ್ನು ಕಂಡು ಹೇಸಿ ಖೇದದಿಂದಲೂ ದುಃಖದಿಂದಲೂ ಹೇಳುತ್ತಾನೆ "ಅಯ್ಯೋ, ಪಾಪಿ! ಎಂಥಾ ಕೆಲಸ ಮಾಡಿದೆ....ನಿನ್ನ ಬುದ್ಧಿಗೇನು ಬಂತು ..."

ಶ್ರೀಪಾದುವಿಗೆ ಮೊದಲೇ ಒಡಲು ಕುದಿಯುತಿತ್ತು. ಆದ್ದರಿಂದ ಕೃತವರ್ಮನ ಈ ಮಾತುಗಳು ಕೊಂಚ ಗಟ್ಟಿಯಾಗಿಯೇ ಬಂದವು. ಅವನು ಅಷ್ಟು ಆಡಿದ್ದನೋ ಇಲ್ಲವೋ, ವರಾಂಡದ ಕಡೆಯಿಂದ ಚೆಲುವಯ್ಯನವರು ನುಗ್ಗಿಯೇ ನುಗ್ಗಿದರು.

ಅವರು ಬಿರುಗಾಳಿಯಂತೆ ಬಂದಿದ್ದೊಂದು ಗೊತ್ತು, ಯಾಕೆ ಏನು ಎಂದು ಕೇಳದೆ ಫಟೀರೆಂದು ಶ್ರೀಪಾದುವಿನ ಕೆನ್ನೆಗೆರಡು ಕೊಟ್ಟದ್ದು ಗೊತ್ತು. ಆಮೇಲೆ ಅವನ ಕೈಯಲ್ಲಿದ್ದ, ಕೃತವರ್ಮನ ಪಾತ್ರದ ಮಾತುಗಳನ್ನು ಬರೆದುಕೊಂಡಿದ್ದ, ಹಾಳೆಯನ್ನು ಕಿತ್ತುಕೊಂಡು ಹೋಗಿದ್ದೊಂದು ಗೊತ್ತು. ಒಂದುಕ್ಷಣ ಶ್ರೀಪಾದುವಿಗೆ ತಲೆ ತಿರುಗಿ ಬಂದಂತಾಯಿತು. ಅವನಿಗೆ ಯಾವುದೂ ಅರ್ಥವಾಗಲಿಲ್ಲ. ನೋವಿಗಿಂತ ಹೆಚ್ಚಾಗಿ ಅಪಮಾನ ಅವನ ಎದೆಯನ್ನು ದಹಿಸತೊಡಗಿತು. ಆಟದಿಂದ ತಪ್ಪಿಸಿಕೊಂಡು ಬಂದು ಇಲ್ಲಿ ನಿಂತಿರುವುದಕ್ಕಾಗಿ ಈ ಶಿಕ್ಷೆಯಿರಬಹುದೋ ಎಂದು ಅವನದೊಂದು ಊಹೆ. ಅವನ ಬುದ್ಧಿ ಮಂಕಾಯಿತು. ಕೊನೆಗೆ ಯೋಚಿಸತೊಡಗಿದಾಗ ತನ್ನ ನಾಟಕದ ಪಾತ್ರದಿಂದಾಗಿ ಇಷ್ಟೆಲ್ಲ ಅನರ್ಥ ಸಂಭವಿಸಿತೆಂದು ಕಂಡುಬಂದು ಅವನ ರೋಷವೆಲ್ಲ ಕೃತವರ್ಮನ ಮೇಲೆ ತಿರುಗಿತು. ಆ ಪಾತ್ರದ ಮಾತುಗಳನ್ನು ಗಟ್ಟಿಮಾಡಿಕೊಳ್ಳುವುದಕ್ಕಲ್ಲದಿದ್ದರೆ ತಾನು ಆ ಮುಕ್ಕಣ್ಣನ ಜೊತೆಗೆ ಹೋಗಿ ಹಿಂದಿನ ಬೆಂಚಿನಲ್ಲಿ ಕುಳಿತು, ಕಾಲಿಗೆ ಸಿಗರೇಟಿನ ಉರಿ ತೀಡಿಸಿಕೊಂಡು, ಮೇಷ್ಟರಿಂದ ಕರ್ಣಭಂಗಮಾಡಿಸಿಕೊಂಡು, ಜೊತೆಯವರಿಂದ ಗೇಲಿಮಾಡಿಸಿಕೊಂಡು, ಮತ್ತೆ ಈ ಹೊಡೆತಗಳಿಗೆ ಗುರಿಯಾಗುತ್ತಿದ್ದೆನೆ ಎಂದು ಅವನ ಮನಸ್ಸು ಕುದಿಯಿತು. ಅದ್ದರಿಂದ ತನಗೆ ನಾಟಕದ ಪಾತ್ರವೇ ಬೇಡ ಎಂದು ಬಹಳಹೊತ್ತು ಯೋಚಿಸಿ ನಿರ್ಧಾರಕ್ಕೆ ಬಂದ. ನಾಟಕದ ಮೇಷ್ಟರಿಗೆ ಹಾಗೆಂತ ತಿಳಿಸಿಯೇ ಬಿಡುತ್ತೇನೆಂದು ಮುಖ ಬಿರಿಸಿಕೊಂಡು ಹೊರಡಲು ಸಿದ್ಧನಾದ. ಆಗ ಮತ್ತೆ ಚಲುವಯ್ಯನವರು ಪ್ರವೇಶಿಸಿದರು. ಶ್ರೀಪಾದು ದುಃಖ, ರೋಷ ಭಯಗಳಿಂದ ಮತ್ತೊಮ್ಮೆ ನಡುಗಿದ.

ಆದರೆ ಚೆಲುವಯ್ಯನವರು ಬಹಳ ಸೌಮ್ಯತೆಯಿಂದ, ವಾತ್ಸಲ್ಯ ತುಂಬಿದ ದನಿಯಲ್ಲಿ ಶ್ರೀಪಾದುವಿನ ತಲೆಯನ್ನು ಸವರುತ್ತಾ ಅವನನ್ನು ಮಾತನಾಡಿಸಿದರು ನಾಟಕದ ಮಾತುಗಳನ್ನು ಬರೆದುಕೊಂಡಿದ್ದ ಹಾಳೆಯನ್ನು ಮತ್ತೆ ಅವನ ಕೈಗೆ ಕೊಟ್ಟು "ಚೆನ್ನಾಗಿ ಕಲಿತುಕೋ ಮರಿ, ಪಸ್ಟ್‌ಕ್ಲಾಸಾಗಿ ಆಕ್ಟ್‌ಮಾಡು"—ಎಂದರು. ಶ್ರೀಪಾದುವಿಗೆ ಇದೂ ಅರ್ಥವಾಗಲಿಲ್ಲ. ಕಣ್ಣೀರು ಮಾತ್ರ ಉಕ್ಕಿಬಂತು. ರೋಷವೂ ಹೆಚ್ಚಿತು ಮೇಷ್ಟರ ಕೈಯನ್ನು ದೂಡಿ ಅವನು ಬಿಕ್ಕತೊಡಗಿದ. ಆಗ ಚೆಲುವಯ್ಯನವರು "ಲೋ ಶ್ರಿಪಾದು, ಅಳಬೇಡವೋ....ನೋವಾಯಿತೇನೋ ಅಪ್ಪು...."-ಎಂದೆಲ್ಲಾ ನಾನಾ ವಿಧವಾಗಿ ಸಂತೈಸಲು ಯತ್ನಿಸಿ ಸ್ವಲ್ಪಹೊತ್ತಿನಮೇಲೆ ಸಫಲರಾದರು.


ಶ್ರೀಪಾದು ಆಟವಾಡದೆ ಕ್ಲಾಸ್‌ರೂಮಿಗೆ ಹಿಂದಿರುಗಿದಾಗ ಚೆಲುವಯ್ಯನವರು ವರಾಂಡದಲ್ಲಿ ನಿಂತಿದ್ದರು. ಇದ್ದಕ್ಕಿದ್ದಹಾಗೆ ಕೈ ಕೋಟಿನ ಜೇಬಿನೊಳಗೆ ಹೋಯಿತು. ಅಲ್ಲಿ ಮುಕ್ಕಣ್ಣನ ಸಿಗರೇಟು ಪ್ಯಾಕು ಕುಳಿತಿತ್ತು. ಹುಡುಗರಿಗೆ ಆಟದ ಸಮಯ. ಸುತ್ತ ಮುತ್ತ ಯಾರೂ ಇಲ್ಲ ಎಂದುಕೊಂಡು ಅವರು ಒಂದು ಸಿಗರೇಟನ್ನು ಬಾಯಿ

ಗಿಟ್ಟುಕೊಂಡರು. ಆಗಲೇ ಅವರ ಹಿಂಬದಿಯಿಂದ ಕೃತವರ್ಮ ಕಿರಿಚಿದ್ದು—
"ಅಯ್ಯೋ, ಪಾಪಿ! .. ಎಂಥಾ ಕೆಲಸ ಮಾಡಿದೆ . ನಿನ್ನ ಬುದ್ಧಿಗೇನು ಬಂತು...."
ಎಂದು. ಹಿಂದಿರುಗಿ ನೋಡಿದರೆ ಈ ಪುಟಾಣಿ ಹೀಗೆ ಅರಚುತ್ತಿರುವುದು. ಎಲಾ ನಿನ್ನ ಮೈಯ ತಿಮರೇ ಎಂದು ಬಂದವರೇ ಶ್ರೀಪಾದುವಿಗೆ ಎರಡು ಹೇರಿದರು. ಕೊನೆಗೆ ಅವನ ಕೈಯಲ್ಲಿದ್ದ ಕಾಗದವನ್ನು ಓದಿನೋಡಿದ ಮೇಲೆಯೇ ಪರಿಸ್ಥಿತಿ ಅವರಿಗೆ ಅರ್ಥವಾಗಿ ಪ್ರಾಯಶ್ಚಿತ್ತಕ್ಕೆ ಅವರು ಓಡಿಬರುವಂತಾದದು.

ಇದು ನಡೆದಿದ್ದು ಹತ್ತು ವರ್ಷಗಳ ಹಿಂದೆ. ಶ್ರೀಪಾದು ಈಗ ಕಾಲೇಜಲ್ಲಿ. ಮೇಷ್ಟರು ಚೆಲುವಯ್ಯ ರಿಟೈರಾಗಿದ್ದಾರೆ. ಎಲ್ಲಾದರೂ ಗುರು ಶಿಷ್ಯರು ಸಂಧಿಸುವುದುಂಟು. ಆಗ ಕೃತವರ್ಮನ ಈ ವಿಷನಿಮಿಷಗಳು ನೆನಪಿಗೆ ಬರುತ್ತವೆ. ಇಬ್ಬರ ಮುಖದಲ್ಲಿಯೂ ಅರ್ಥ ಗರ್ಭಿತವಾದ ಒಂದು ನಗು ಮಿಂಚುತ್ತದೆ. ಆದರ ರಹಸ್ಯ ಅವರಿಬ್ಬರಿಗೇ ಗೊತ್ತು.

—ರಾಮಕೃಷ್ಣ.

---



# ಪರಿಹಾರ

ನಿರುದ್ಯೋಗ ಸಮಸ್ಯೆ ಬೃಹದಾಕಾರ ತಾಳಿದೆ, ಸರಿ. ಆದರೆ, ಅದನ್ನು ಕೂಲಂಕುಷವಾಗಿ ಪರಿಶೀಲಿಸುವವರಪರೂಪ. ಹೊಟ್ಟೆ ತುಂಬ ಅನ್ನ, ಕಣ್ಣು ತುಂಬ ನಿದ್ರೆ, ಮಾನ ಮುಚ್ಚಲು ಬಟ್ಟೆ, ತಲೆಯ ಮೇಲೊಂದು ಸೂರು, ಇಷ್ಟು ಸಿಕ್ಕರೆ, ಸುಖ ಜೀವನ! ಉದ್ಯೋಗದಿಂದಾಗಲಿ, ನಿರುದ್ಯೋಗದಿಂದಾಗಲಿ, ಇವಷ್ಟನ್ನೂ ಪ್ರತಿ ಒಬ್ಬನಿಗೂ ಕೊಡುವುದೇ ಸಮತಾ ನಮೂನೆ ಸುಖೀ ರಾಜ್ಯ ಭಾರತದ ಗುರಿ!

ಅಂದರೆ, ವ್ಯವಸಾಯ ಅಭಿವೃದ್ಧಿ ಆಗಬೇಕು. ಅಂದರೆ, ವ್ಯವಸಾಯ ಪದ್ಧತಿ ಉತ್ತಮವಾಗಬೇಕು. ಅಂದರೆ, ವಿದ್ಯಾಭ್ಯಾಸ ಹೆಚ್ಚಬೇಕು. ಶಾಲಾ ಕಾಲೇಜುಗಳು ಬೆಳೆಯಬೇಕು ಅಂದರೆ, ಕಟ್ಟಡಗಳಾಗಬೇಕು, ಸಾಮಗ್ರಿಗಳಾಗಬೇಕು, ಪ್ರಚಾರಕರಾಗಬೇಕು, ಉಪಾಧ್ಯಾಯರಾಗಬೇಕು. ಅಂದರೆ, ಈಗ ನಿರುದ್ಯೋಗ ಯಾತನೆಯನ್ನನುಭವಿಸುವವರಿಗೆಲ್ಲ ಉದ್ಯೋಗ ದೊರೆತೇ ದೊರೆಯುತ್ತದೆ, ಅಂದಮೇಲೆ, ವ್ಯವಸಾಯ ಅಭಿವೃದ್ಧಿ ಹೊಂದಿದರೇನು? ಹೊಂದದಿದ್ದರೇನು?

ಮಳೆ ಬೀಳಬೇಕು, ನದಿಗಳು ತುಂಬಬೇಕು, ಅವುಗಳನ್ನು ತಡೆದು ಕೆರೆಗಳನ್ನು ಕಟ್ಟಬೇಕು ಅದಕ್ಕೆ ಮರಗಳನ್ನು ನೆಡಬೇಕು, ನೀರೆರೆಯಬೇಕು, ಆಡು ತಿನ್ನದಂತೆ ಅವನ್ನು ಕಾಪಾಡಬೇಕು; ಅನಂತರ ಅವು ಅರಣ್ಯವಾಗಿ ಬೆಳೆದು, ತಂಪೆರಚಿ, ಮೋಡಗಳನ್ನು ಕರಗಿಸಿ ಮಳೆ ಕರೆದು ಭೂಮಿ ತಣ್ಣಗಾಗಿ, ನೀರು ಹರಿಯದೆ ನಿಲ್ಲಸಬೇಕು. ಅಂದರೆ, ಆಡುಗಳನ್ನು ತಡೆಯಲು ಲಕ್ಷಾಂತರ ಜನರನ್ನು ನಿಯಮಿಸಿದರೆ, ಮಳೆ ಬೀಳುವ ಮೊದಲೇ ನಿರುದ್ಯೋಗ ಸಮಸ್ಯೆ ಪರಿಹಾರ.

ಹಲವರು ಉದ್ಯೋಗಸ್ವಭಾವದವರು; ಹಲವರು ಹುಟ್ಟು ಸೋಮಾರಿಗಳು ಇದೇ ಮಾನವ ವೈವಿಧ್ಯತೆಯ ಗುಟ್ಟು—ಉದ್ಯೋಗ ಸ್ವಭಾವದವರನ್ನು ತಿವಿಯಬೇಕಾಗಿಯೇ ಇಲ್ಲ; ಉಳಿದವರನ್ನು ತಿವಿದೆಬ್ಬಿಸಿದರೆ, ಅನಾಹುತ, ನಷ್ಟ, ಯದ್ವಾತದ್ವಾ ಸೋಮಾರಿಗಳಿಗೆ ಸುಖಜೀವನ ಒದಗಿಸುವುದೇ ಉಳಿದವರ ಪರೋಪಕಾರ. ಆದ್ದರಿಂದ, ಸೇವಾ, ದಯಾ, ನಿಸ್ಪೃಹತೆ, ಉಪಕಾರ, ಪುಣ್ಯ ಇತ್ಯಾದಿ ಪ್ರಚಾರ ಮಾಡುವುದಕ್ಕಾಗಿ ನೂರಾರು ಜನರನ್ನು ನಿಯಮಿಸಿದರೆ, ಅಷ್ಟಕ್ಕಷ್ಟು ನಿರುದ್ಯೋಗ ಸಮಸ್ಯೆ ಪರಿಹಾರ!

—ಕಾಮತ್.

# ಸುತ್ತಿಗೆ ಸೇವೆ

"ಉಳ್ಳವರು ರಾಮ ಮಂದಿರವ ಮಾಡುವರು. ನಾನೇನು ಮಾಡುವೆ? ಸೋತಿರುವೆನಯ್ಯ! ಎನ್ನ ಸುತ್ತಿಗೆ ವಿತರಣೆಯಿಂದಲೇ ಪ್ರೀತನಾಗಯ್ಯ"-ಎಂದು ಕೈಜೋಡಿಸಿ ಸುಮ್ಮನಾಗಿದ್ದಾರೆ ರಾಮಭದ್ರಯ್ಯನವರು.

ಊರಿಗೊಂದು ರಾಮ ಮಂದಿರವನ್ನು ಕಟ್ಟಿಸಲು ರಾಮಭದ್ರಯ್ಯನವರು ಪ್ರಯತ್ನಿಸಲಿಲ್ಲವೆಂದಲ್ಲ. ಅವರ ಪ್ರಯತ್ನ ಅವರು ಮಾಡಿದರು. ಆಂಜನೇಯ ಸ್ವಾಮಿ ಸೀತಾನ್ವೇಷಣೆಗೆ ಹೊರಟಂತೆ ರಾಮಚಂದ್ರಯ್ಯನವರು ರಾಮ ಮಂದಿರದ ಕಟ್ಟಡಕ್ಕೆ ಬೇಕಾಗುವ ಸಾಮಗ್ರಿಗಳ ಅನ್ವೇಷಣೆಗಾಗಿ—ಅಷ್ಟೇ ಉತ್ಸಾಹದಿಂದ ಓಡಾಡಿದರು. ಸಾಹುಕಾರರು ಕಂಟ್ರಾಕ್ಟರುಗಳನ್ನೆಲ್ಲ ಅಲುಗಾಡಿಸಿ ಸ್ಯಾಸಿಂದ ಸಿಮೆಂಟ್ ತನಕದ ನಾನಾ ಸಾಮಗ್ರಿಯೆಂದರೆ ಕಲ್ಲಿನ ಪುಡಿ ಮಾತ್ರ. ಅದಿಲ್ಲದೆ ಕಾಂಕ್ರೀಟ್ ತಯಾರಿಸುವುವಂತಿಲ್ಲ ಅದನ್ನು ಒದಗಿಸಬಲ್ಲ ಕಂಟ್ರಾಕ್ಟರ್ ಕೆಂಪಯ್ಯ ಮಾತ್ರ ರಾಮಭದ್ರಯ್ಯನವರ ಬೇಡಿಕೆಗೆ ಒಪ್ಪಲಿಲ್ಲ. ಹೆಚ್ಚು ಕೇಳಿದರೆ ತಾನು ರಾವಣನ ವಂಶದವನು; ರಾಮ ಮಂದಿರ ಕಟ್ಟುವುದಕ್ಕೆ ಸಹಾಯಮಾಡಲೊಲ್ಲೆ ಎಂದು ದಾಕ್ಷಿಣ್ಯವಿಲ್ಲದೆ ಹೇಳಿದ. ರಾಮಭದ್ರಯ್ಯನವರಿಗೆ ಅದು ಸಹಕಾರೀತವಾಯಿತು. ಅವರು ಒಂದು ಸತ್ಯಾಗ್ರಹವನ್ನೇ ಪ್ರಾರಂಭಿಸಿದರು.

ಮಾರನೆಯ ದಿನವೇ ಬೆಳಗ್ಗೆ ಐದು ಗಂಟೆಗೆ ಎದ್ದು ಮನೆಯಲ್ಲಿದ್ದ ಒಂದು ಸುತ್ತಿಗೆಯನ್ನು ತಂದು ಲಾಟೀನಿನ ಬೆಳಕಿನಲ್ಲಿ, ರಾಮ ಮಂದಿರದ ಕಟ್ಟಡದ ಜಾಗ ದಲ್ಲಿ ಕಲ್ಲು ಪುಡಿಮಾಡಲು ಪ್ರಾರಂಭಿಸಿದರು. ಪೆಟ್ಟಿಗೊಂದರಂತೆ ರಾಮ ಮಂತ್ರ ಜಪಿಸಿದರು. ಬಡಗಿ ಭೀಮಣ್ಣನಿಗೆ ಹೇಳಿ ಎಂಟು ಸುತ್ತಿಗೆಗಳನ್ನು ಮಾಡಿಸಿ ಮನೆಯ ಹೆಂಗಸರು ಮಕ್ಕಳನ್ನೂ ಕರೆದು ಒಂದೊಂದು ಕೊಡಿಸಿದರು. ಇವರ ಭಕ್ತಿಯನ್ನೂ ಸೇವಾತುರತೆಯನ್ನೂ ಕಂಡು ಜನ ಬೆರಗಾದರು. ಹೀಯಾಳಿಸುವವರು ಹೀಯಾಳಿಸಿದರು. ಇವರು ಜಲ್ಲಿ ಪುಡಿ ತಯಾರಿಸಿ ರಾಮ ಮಂದಿರ ಕಟ್ಟಿಸುವಾಗ ತ್ರೇತಾಯುಗ ಮತ್ತೆ ಬರುತ್ತದೆ ಎಂದರು. ಆದರೆ ರಾಮಭದ್ರಯ್ಯ ಯಾವುದಕ್ಕೂ ಕಿವಿ ಹಾಕಲಿಲ್ಲ.

ಸತ್ಯಾಗ್ರಹ ಪ್ರಾರಂಭವಾದ ಐದಾರು ದಿನಗಳಲ್ಲಿಯೇ ರಾಮಭದ್ರಯ್ಯನವರ ನಿರ್ಧಾರದ ಬಿಗಿ ಜನರಿಗೆ ತಿಳಿಯಿತು. ಚಿಲ್ಲರೆ ಅಂಗಡಿ ವೆಂಕಟೇಶ ಬಂದು "ನನಗೂ ಒಂದು ಸುತ್ತಿಗೆ ಕೊಡಿ; ನನ್ನದೂ ಅಷ್ಟು ಸೇವೆ ಇರಲಿ" ಎಂದ ಒಂದು ದಿನ ಬೆಳಗ್ಗೆ. ಅದರ ಮಾರನೇ ದಿನ ಇನ್ನೂ ನಾಲ್ಕು ಮಂದಿ ಹೆಚ್ಚು ಬಂದರು. ಶ್ಯಾನುಭೋಗ ಶೀನಯ್ಯ, ಸಾಹುಕಾರ್ ಸೋಮಯ್ಯ, ಸೋಡಾ ಅಂಗಡಿ ಬಸಪ್ಪ—ಹೀಗೆ ಗುಂಪು ದೊಡ್ಡದಾಗುತ್ತಾ ಬಂತು. ರಾಮಭದ್ರಯ್ಯನವರ ಉತ್ಸಾಹಕ್ಕೆ ಮೇರೆಯಿಲ್ಲ. ಅವರು ಬಂದವರಿಗೆಲ್ಲ ಹೆಚ್ಚು ಹೆಚ್ಚು ಸುತ್ತಿಗೆಗಳನ್ನು ಒದಗಿಸಿ ಸೇವಾವಕಾಶವನ್ನು ಕಲ್ಪಿಸಿಕೊಟ್ಟರು ಹದಿನೈದು ದಿನ ಹೀಗೆ ನಡೆಯಿತು. ಬೆಳಗ್ಗೆ ಒಂದು ಘಂಟೆ ಕೆಲಸ ನಡೆಯುತ್ತಿತ್ತು. ಆದರೂ ಕಲ್ಲಿನ ಪುಡಿಯ ರಾಶಿ ದೊಡ್ಡದೇನೂ ಆಗಲಿಲ್ಲ ವೆಂದೋ ಏನೋ ಇದ್ದಕ್ಕಿದ್ದ ಹಾಗೆ ಉತ್ಸಾಹ ಹಾರತೊಡಗಿತು. ಸೇವಾತುರರ ಸಂಖ್ಯೆ ಏರಿದ್ದಕ್ಕಿಂತ ಬೇಗನೆ ಇಳಿಯಿತು. ಕೊನೆಗೆ ಉಳಿದಿದ್ದು ರಾಮಭದ್ರಯ್ಯ ನವರೊಬ್ಬರೆ. ಇತ್ತ ಬಡಗಿ ಭೀಮಣ್ಣ ಸುತ್ತಿಗೆಗಳ ಬೆಲೆ ಇಷ್ಟಾಯಿತು ಎಂದು ಹೇಳಿ ಕಾಸು ಕೇಳಿದ. ರಾಮಭದ್ರಯ್ಯನವರು ಆ ಬಿಲ್ಲು ನೋಡಿ ಕಂಗಾಲಾದರು. ಸುತ್ತಿಗೆಗಳೆಷ್ಟಿವೆ ಎಂದು ಲೆಕ್ಕಮಾಡಿದರೆ ಒಟ್ಟು ಹನ್ನೆರಡು ಮಾತ್ರ ಉಳಿದಿದಾವೆ. ಅವುಗಳಲ್ಲಿ ಏಳಕ್ಕೆ ಹಿಡಿಯಿಲ್ಲ!

ಭೀಮಣ್ಣನಿಗೆ "ಶ್ರೀರಾಮಚಂದ್ರನ ಸೇವೆ ಅಂತ ತಿಳಕೋಪ್ಪ" ಎಂದರೂ ಆತ ಒಪ್ಪಲಿಲ್ಲ. ಕಾಸು ತೆರಲೇಬೇಕಾಯಿತು. ರಾಮಭದ್ರಯ್ಯನವರು ಮಂದಿರದ ಕೆಲಸವನ್ನು ಅಲ್ಲಿಗೇ ನಿಲ್ಲಿಸಿದರು. ಶ್ರೀರಾಮಚಂದ್ರನಿಗೆ ಪ್ರೀತಿಯಾಗಲಿ ಎಂದು ಮನೆಯಲ್ಲಿನ ಪಟಕ್ಕೇ ಕೈಮುಗಿದರು.

ಈಗ ಊರಿನ ನಾಲ್ವತ್ತು ಐವತ್ತು ಮನೆಗಳಲ್ಲಿ, ರಾಮನವಮಿಯ ದಿನ, ರಾಮಭದ್ರಯ್ಯನವರು ಒದಗಿಸಿದ ಸುತ್ತಿಗೆಗಳಿಂದಲೇ ಏಲಕ್ಕಿ ಕಾಳು ಜಜ್ಜಿ ಪಾನಕಕ್ಕೆ ಹಾಕಿ ಶ್ರೀರಾಮಚಂದ್ರನಿಗೆ ಅರ್ಪಿಸಿ, ಭಕ್ತರು ಪುನೀತರಾಗುತ್ತಿದ್ದಾರೆ. ಅವರ ಪುಣ್ಯದಲ್ಲಿ ತಮಗೂ ಒಂದು ಋಣಭಾಗ ಇದೆ ಎಂಬುದೇ ರಾಮಭದ್ರಯ್ಯನವರಿಗೆ ಸಮಾಧಾನದ ವಿಷಯ.

—ರಾಮಕೃಷ್ಣ.

— o —

**ಹಾದಿಯಲ್ಲಿ ಕೇಳಿಸಿದುದು.**

"ನೋಡಿ—ಟಿ. ಬಿ. ಅಂತ ಹೆಸರಿದ್ದಾಗ ಕಟ್ಟಡಕ್ಕೆ ಕ್ಷಯರೋಗ ಬಂದ ಹಾಗೇ ಇತ್ತು. ಈಗ ಪ್ರವಾಸಿ ಮಂದಿರ್ ಆಗಿದೆ-ಅಂದರೆ ಪಿ. ಯಮ್-ಪೋಸ್ಟ್ ಮಾರ್ಟೆಮ್‌ಗೆ ತಯಾರಾಗಿದೆ.

# ಆ ವೆಸ್ಟು-ಈ ಈಸ್ಟು

ಗುಂಡಾ ಇಂಗ್ಲೇಂಡ್ ಹಿಂತಿರುಗಿದವ ಲಂಕಾಪಟ್ಣದ ಯೋಜನೆಯಲ್ಲಿ ಲಂಕಾಷೈರ್ ಸುತ್ತಿಬಂದ ಲಕ್ಕಿ ಫೆಲೋ. ನವನಾಗರೀಕರು ಎನ್ನಿಸಿಕೊಂಡ ಆ ಆಂಗ್ಲರ ಮನೆಮಠಗಳನ್ನ ಹೊಕ್ಕು ಅವರ ಭುಜದಮೇಲೆ ಕೈಹಾಕಿ ಅವರ ಟೋಪಿ ತಾನು ಹಾಕಿಸಿಕೊಂಡು ಅವರ ಬೀದಿಗಳಲ್ಲಿ ಅಲೆದು ಬಂದಿದ್ದ. ನಮ್ಮ "ಗುಡ್ ಪಾಯಿಂಟ್‌ಸು"ಗಳನ್ನ ಅವರಿಗೆ ಕೊಟ್ಟು ಅವರ 'ಗುಡ್‌ಪಾಯಿಂಟ್'ಗಳನ್ನ ನಾವು ಆಚರಣೆಗೆ ತರಬೇಕೆಂಬುದೇ ಅವನ ಸಂದೇಶ.

ಅಂದು ಮಾರ್ಚಿ ೪. ಬಂದ ಸಂಬಳ ಪೂರ್ತಿ ಖರ್ಚಾಗದೇ ಇದ್ದುದರಿಂದ ತಕ್ಷಣ ಜ್ಞಾಪಕಕ್ಕೆ ಬಂತು ತಾನು "ಗೌರಿ"ಯನ್ನ ಕೈಹಿಡಿದದ್ದು ಏಳುವರ್ಷಗಳ ಹಿಂದೆ ಇದೇದಿನ ಎಂಬುದು. ಪಾಶ್ಚಾತ್ಯರು ತಮ್ಮ ತಮ್ಮ ಮದುವೇ ದಿನಗಳನ್ನ ವರ್ಷಾ ವರ್ಷ ಎಷ್ಟು ವೈವಿಧ್ಯತೆ, ವಿತರಣೆಗಳಿಂದ ವಿಜೃಂಭಿಸುತ್ತಾರೆ, ಅದರಲ್ಲಿ ಎಂಥಾ ತತ್ವಏದೇ ಎಂಬುದನ್ನ ಜ್ಞಾಪಿಸಿಕೊಂಡು, ತಾನು ಸಹ ತನ್ನ ಗೌರೀ"ಗೆ ಒಂದು ಸರ್‌ಪ್ರೈಸ್ ಪ್ರಸೆಂಟ್ ಆದರೂ ಕೊಡಬೇಕೆಂದು ನಿರ್ಧರಿಸಿ, ಒಂದು ಸೀರೆ ಕುಪ್ಪುಸವನ್ನ ಗಿಫ್ಟ್ ಪಾರ್ಸಲ್ ಮಾಡಿಸಿಕೊಂಡು ಬಂದು ಗೌರಮ್ಮನವರಿಗೆ ಕಾಣದಂತೇ ದೇವರ ಗೂಡಿನಲ್ಲಿ ಅವುಕಿಸಿಟ್ಟು "ಗೌರಾ" ಎಂದು ಕೂಗಿದ ಗುಂಡಾ. ಮುಸುರೆ ತಿಕ್ಕುತ್ತಿದ್ದ ಗೌರಮ್ಮ ಕೈಒರಸಿಕೊಳ್ಳುತ್ತಾ ಕೋಪವಾಗಿಯೇ ಬಂದರು. ಗುಂಡ ಗೌರಮ್ಮನವರ ದೃಷ್ಟಿಯನ್ನ ಹೊರಳಿಸಿದ ಚಾಣಕ್ಯತೆಯಿಂದ. ಪಾರ್ಸಲ್ಲನ್ನು ಹರಿದು ನೋಡಿದ ಗೌರಮ್ಮ "ಓ ಸೀರೆ, ಕುಬಸ!....ಇದೇನು ಬಂತು, ಹಬ್ಬ ಅಲ್ಲ, ಹರಿದಿನ ಅಲ್ಲ....ಈಗ ಯಾರಿಗಿದು? "ಎಂದಂಕುಶವಿಟ್ಟರು. ಗುಂಡಾ ವರ್ಣಿಸಿದ" ನೋಡುಕಣೇ....ಇಂಗ್ಲೇಂಡ್ನಲ್ಲಿ ಗಂಡಾ ಹೆಂಡತಿಯರು ತಮ್ಮ ಮದುವೆಯಾದ ದಿನವನ್ನ ವರ್ಷೇ ವರ್ಷೇ ಹಬ್ಬವಾಗಿ ಮಾಡ್ತಾರೆ....ಹೆಂಡತಿಯರಿಗೇ ಆ ದಿನ ಗಂಡಂದಿರು ಭಾರಿ ಭಾರಿ ಪ್ರಸೆಂಟ್‌ಗಳನ್ನ ತಂದು ಕೊಟ್ಟರೇನೇ ಮನೆಯಲ್ಲಿ ಸಂತೋಷ....ಇಲ್ಲದಿದ್ದಲ್ಲಿ ಎಷ್ಟೋಸಾರಿ ಡೈವೋರ್ಸ್.. ಹಾಗೇ, ನಾನು ಸಹ ನಮ್ಮ ಮದುವೇ ಆದ ದಿನವನ್ನ-ಈ ದಿನಕ್ಕೆ ೭ ವರ್ಷವಾಯ್ತು....ಇದು ಆ ಪ್ರಸೆಂಟ್ ನಿನಗೆ ಚಿನ್ನ....ಇದು ನಿನಗೇ ...ಇನ್ಯಾರಿಗೆ? .. ಎಂದ.


ಒಂದೇ ಏಟಿಗೇ ೫೦/-ರೂಪಾಯಿನ ಸೀರೆ ಕಂಡು ತನ್ನ ಪ್ರೇಮ ಪುತ್ಥಳಿಕೆ ಆಗುವ ಆಶ್ಚರ್ಯ-ಸಂತೋಷಗಳ ದ್ವಿವೇಣಿ ಸಂಗಮದ ಗಭೀರತೆಯನ್ನ ಮನಸ್ಸಿ

ನಲ್ಲಿಯೇ ಚಿತ್ರಿಸಿ ಸಂತಸವಿಟ್ಟು. ತನಗೇ ಅದು ಪ್ರಸೆಂಟ್ ಎಂದು ತಿಳಿದ ತನ್ನ 'ಗೌರ' ಇಂಗ್ಲೆಂಡಿನ ಗೃಹಲಕ್ಷ್ಮಿಯವರಂತೇ "ಅಯ್ಯೊ ನೀನು ಎಷ್ಟು ವಂಡರ್ ಫುಲ್" ಎಂದರಚಿ ಓಡಿಬಂದು ತನ್ನ ತಬ್ಬಿಕೊಂಡು ಮುದ್ದಾಡುವಳೆಂದು ಬಗೆದು ಉಸಿರು ಬಿಗಿಹಿಡಿದು ನಿರೀಕ್ಷಿಸಿದ....ಆದರೇ....

ಗೌರಮ್ಮನ ಕಣ್ಣಲ್ಲಿ ಫಳಫಳನೇ ನೀರು ಪ್ರವಹಿಸಿತು....ಅಂದಳು ಗೌರಮ್ಮ.... "ನನ್ನನ್ನ ಗರತೀಂತ ತಂದುಕೊಂಡ್ರಾ ಅಥವ ಪ್ರಸೆಂಟ್‌ಗಳು ತಂದ್ಕೊಟ್ರೆ ಮಾತ್ರ ಖುಷಿ ಯಾಗೋ ವೇಶ್ಯೇಂದ್ಕೊಂಡ್ರಾ........"

ಗುಂಡನ ಮುಖ ಮೊದಲನೇ ಸಾರಿ ಬೀರು ಕುಡಿದವರಂತಾಗಿತ್ತು....

—ಶನಿ.



# ಶ್ರೀಮಂತರ ಹಾವಳಿ

ಈಚಿಗೆ ಸಾ ್ತ್ಯಕ್ಷೇತ್ರದಲ್ಲಿ, ಅದರಲ್ಲೂ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಶ್ರೀಮಂತರ ಹಾವಳಿ ಹೆ ್ಚುತ್ತಿದೆ.

ಅಂದರೆ, "ಶ್ರೀ" ಎಂಬ ಪದಪ್ರಯೋಗವನ್ನು ಧಾರಾಳವಾಗಿ ಮಾಡುವವರ ಹಾವಳಿ ಹೆಚ್ಚಿದೆ, ಎಂಬುದೇ ಅರ್ಥ.

ಶ್ರೀ ಶ್ರೀ ಶ್ರೀಗಳ ಹಾವಳಿ ಅಲ್ಲ; ಶ್ರೀ ಶ್ರೀ ೧೧೦೮ ಗಳ ಹಾವಳಿಯಲ್ಲ. ಶ್ರೀ ಎಂಬ ಪದದ ಹಾವಳಿ. ಶ್ರೀ ಎಂಬುದನ್ನು ಪದೇ ಪದೇ ಉಪಯೋಗಿಸುವ ಕಾಮ ಶ್ರೀಯೂ ಅದಕ್ಕೆ ಬೇಕಾದ ಧೈರ್ಯ ಶ್ರೀಯೂ ನಮ್ಮ ಶ್ರೀ ಕವಿಗಳಿಗೆ ಸಮೃದ್ಧಿ ಶ್ರೀ ಅನುಗ್ರಹಿಸಿದೆ. ಪ್ರೇಮ ಶ್ರೀ, ಕಾಮ ಶ್ರೀ, ಎಂಬುದನ್ನು ಐಸಿರಿ (ಎಂದರೆ, I ಶ್ರೀ) ಇರುವವರು ನಾಚಿಕೆ ಶ್ರೀ ಇಲ್ಲದೆ ಅಳವಡಿಸಿಕೊಳ್ಳುತ್ತಿದಾರೆ. ಅದನ್ನೋದುವವರಿಗೆ ಬೇಸರ ಶ್ರೀ ಬಂದು, ಕೋಪ ಶ್ರೀಗೆ ತಿರುಗಿ, ಜ್ವರ ಶ್ರೀಯಾಗುವ ಸಂಭವ ಹೆಚ್ಚು.

ರಾಮ ಶ್ರೀ, ರಾವಣ ಶ್ರೀ ಎಂಬುದರ ವ್ಯತ್ಯಾಸವನ್ನರಿಯಬಲ್ಲ ಬುದ್ಧಿ ಶ್ರೀ-ಅಲ್ಲ, ಧೀ ಶ್ರೀ ಅನೇಕರಿಗಿಲ್ಲದಿದ್ದರೂ, ಈ ಪದವನ್ನು ಮಾತ್ರ ಪಂಕ್ತಿ ಪಂಕ್ತಿಗೂ ಬೆರೆಸಿ ಸಿರಿವಂತರಾಗಲೆಳಸುವರು ಇದೇನು ಮಹಾ ಶ್ರೀ? ಕೇವಲ ಹೀನ ಶ್ರೀ! ಅನುಚಾನ ಶ್ರೀ! ಸನಾತನ ಶ್ರೀ! ಎಂದು ಸಂದೇಹ ಶ್ರೀ ಪೀಡಿತರಾಗಿ ಹಲವು ವಾಚಕರು ತಮ್ಮ ಶಿತ ಶ್ರೀಯನ್ನು ಕೆರೆದುಕೊಳ್ಳುವ ಮೊದಲೇ, ನನ್ನ ಲೇಖನ ಶ್ರೀಯನ್ನು ಇಂಕಿ ಶ್ರೀಯಿಂದ ತೆಗೆದು ವಿರಾಮ ಶ್ರೀಯಲ್ಲಿ ಮಲಗಿಸುತ್ತೇನೆ.

ಶ್ರೀನಾಥ.

---

ಗೆಳೆಯ! ನೀನಿಂದೇಕೆ ಕೊಡೆ ಹಿಡಿದು ನಡೆಯುವಿ?
ಬಿಸಿಲಿಲ್ಲ, ಮಳೆ ಇಲ್ಲ! ಕಾಗೆಗಳ ಹಿಂಡಿಲ್ಲ!
ಅದಕಲ್ಲ! ನನ್ನ ಕೊಡೆ! ತವರೂರು ಮಾಸ್ಕೊದಲಿ
ಕೆಂಪು ಚೌಕದಿ ಈಗ, ಭಾರಿ ಮಳೆ! ಅದಕಾಗಿ.

# ಪರೀಕ್ಷೆಗಳು

ಪರೀಕ್ಷೆಗಳನ್ನು ನಮ್ಮ ಶಿಕ್ಷಣ ಕ್ಷೇತ್ರದಿಂದ ತೊಡೆದು ಹಾಕಬೇಕೆಂಬ ಚಳುವಳಿ. ಗಾಂಧಿ ಚಳುವಳಿಗಿಂತ ಪ್ರಾಚೀನ; "ಪರೀಕ್ಷೆಗಳ ಪರೀಕ್ಷೆ" ಎಂಬ ಗ್ರಂಥವನ್ನು ಹಾರ್ಟಾಗ್ ಎಂಬ ವೈಸ್ ಛಾನ್ಸಲರರೊಬ್ಬರು ಪ್ರಕಟಿಸಿದ್ದಂದಿನಿಂದ ಇದು ತುಂಬಾ ತೀವ್ರವಾಯಿತು. ಯಾರ ಯಾರ ಮಕ್ಕಳು ಪರೀಕ್ಷೆಗಳಲ್ಲಿ ಫೆಯಿಲಾದರೋ ಅವರೆಲ್ಲ, ತಮ್ಮ ಮಕ್ಕಳ ಸಹಿತ, ಈ ಚಳುವಳಿಗೆ ಬೆಂಬಲವೀಯುತ್ತ ಬಂದಿದಾರೆ. ಸ್ವಾತಂತ್ರ ಬಂದಾಗ, ಅದನ್ನು ಸಂಪಾದಿಸಲು ಕಂಠಪೂರ್ತಿ ಸಹಾಯಮಾಡಿದ ವಿದ್ಯಾರ್ಥಿಗಳೆಲ್ಲರೂ, ಭಾರತದಿಂದ ಪರೀಕ್ಷಾ ಭೂತದ ಉಚ್ಚಾಟನೆ ಯಾಗುತ್ತದೆ, ಎಂದು ನಂಬಿದ್ದರು. ಆದರೆ, ಸಪ್ತಸಂವತ್ಸರಗಳು ಸಾಗಿದರೂ, ಇನ್ನೂ ಆ ದೆವ್ವಕ್ಕೆ ಧೂಪ ಹಿಡಿಯುವವರೇ ಹೊರತು, ಧೈರ್ಯವಾಗಿ ಅದಕ್ಕೆ ಚಾಮರಸೇವೆ ಮಾಡುವ ಶೂರ ಶಿಕ್ಷಕಾಧಿಕಾರಿ ಇನ್ನೂ ಹುಟ್ಟದೆ ಇರುವುದು ಭಾರತ ಜನತೆಯ ದುರಾದೃಷ್ಟ.

ಪರೀಕ್ಷೆಗಳಿರಲೇಬೇಕೆಂದು ಹಟಹಿಡಿದು, ಅದಕ್ಕಾಗಿ ವಾದಿಸುವವರೆಲ್ಲ ಕೇವಲ ಹಲವಾರು ಗ್ರಂಥಕೀಟಗಳು ಮಾತ್ರ! ಪರೀಕ್ಷಕರ ಸೋದರಳಿಯಂದಿರು ಮಾತ್ರ. ಅಥವಾ, ಪ್ರಶ್ನೆಪತ್ರಿಕೆಗಳ ವಿಷಯವಾಗಿ ಪ್ರಶ್ನೆ ಹೇಳುವ ಜೋಯಿಸರು; ನೋಟ್ಸುಗಳನ್ನು ತಯಾರಿಸಿ ಮಾರಿ ಹುಡುಗರ ಬುದ್ಧಿಶಕ್ತಿಗೆ ಮಂಕು ಬಡಿದು, ಅವರಿಂದ ಕಾಸು ಕಿತ್ತು ಮೋಸಮಾಡುತ್ತಿರುವ ಹಲವರು ವಣಿಗ್ಜನರು; ಮೂರೇ ಮೂರು ತಿಂಗಳಲ್ಲಿ ಇಡೀ ವಿಷಯವನ್ನು ಇಂಜೆಕ್ಷನ್ ಮೂಲಕ ಮೆದುಳೊಳಗೆ ಸೇರಿಸುತ್ತೇವೆಂದು ಸಾರಿ ಮನೆಮನೆಗೂ ಅಲೆಯುವ ಗುಟಿಕಾಗುರುಗಳು; ಪ್ರಶ್ನೆಪತ್ರಿಕೆಗಳನ್ನು ರಚಿಸಿ, ಉತ್ತರಗಳನ್ನು ತೂಕಮಾಡಿ, ಪುಡಿಕಾಸು ಸಂಪಾದಿಸುವ ಸತದೃಷ್ಟರು— ಇವರೂ ಆ ಗುಂಪಿನಲ್ಲಿರಬಹುದು.

ಆದರೆ, ಇಂಥವರ ಮೆರೆದಾಟ ಇನ್ನುಮುಂದೆ ಸಾಗದು. ನವಭಾರತದ ಯುವಕ ಯುವತಿಯರು ಇನ್ನು ಸುಮ್ಮನಿರಲಾರರು. ವೋಟು ಕೊಟ್ಟು ದೇಶದ ಹಿಗ್ಗು ತಗ್ಗುಗಳನ್ನು ಸಮಪಡಿಸಬಲ್ಲವರು ಯಾರು ಎಂದು ನಿರ್ಧರಿಸುವ ಹಕ್ಕು ಅವರಿಗಿರುವಾಗ, ತಮ್ಮ ಬುದ್ಧಿಯ ಹಿಗ್ಗು ತಗ್ಗುಗಳನ್ನು ಸರ್ವೆ ಮಾಡಲು ಇತರರ ಸಹಾಯ ಅವರಿಗೇಕೆ? ಚುನಾವಣೆ ಕಾಲದಲ್ಲಿ ದೇಶನಾಯಕರ ಸಹಾಯಕ್ಕೆ ಹುಡುಗರು ಹುಡುಗಿಯರೂ ಮನೆಮನೆಗೂ ಅಲೆಯಬೇಕಾದರೆ, ಪರೀಕ್ಷಾ ಫಲಿತಾಂಶ

ಹೊರಬೀಳುವ ಕಾಲಕ್ಕೆ ಹಿರಿಯರು ಅವರಿಗಾಗಿ ಮನೆಮನೆಗೂ ಅಲೆದು ನಂಬರ್ ಸರಿಪಡಿಸಿದರೆ ತಪ್ಪೇನು?

ನೂರು ನಂಬರುಗಳ ಪೈಕಿ ೪೦ ನ್ನಾದರೂ ಪಡೆಯಲೇ ಬೇಕೆಂದು ವಿಶ್ವವಿದ್ಯಾಲಯದವರು ಕಟುಕ ಮನೋಭಾವದಿಂದ ನಿಶ್ಚಿಸುವ ಮೊದಲು, ಪ್ರಜಾಸತ್ತಾತ್ಮಕವಾಗಿ ಅವರು ಸಂಬಂಧ ಪಟ್ಟವರನ್ನೆಲ್ಲ ವಿಚಾರಿಸಿದರೆ? ಹಾಗೆ ಮಾಡಿದರೆ, ೯ ಬಂದ ವರಗತಿ ಏನು? ೩೯ ಬಂದವನೂ ಪಾಸು, ಎಂದರೆ, ೩೮ ಬಂದವನ ಭವಿಷ್ಯ ಏನು? ೩೭, ೩೬, ೩೫....ಹೀಗೆ ಇಳಿಸುತ್ತಾ ಹೋಗಿ, ಕೂತವನಿಗೆಲ್ಲ ಕರೀ ಗೌನು, ಎಂದೇಕೆ ಮಾಡಬಾರದು?

ಅದೂ ಅಲ್ಲದೆ, ಕಾಳಿದಾಸ ಯಾವ ಯೂನಿವರ್ಸಿಟಿ ಪಿ. ಎಚ್. ಡಿ? ವಾಲ್ಮೀಕಿ ಯಾವ ಪ್ರಶ್ನೆಪತ್ರಿಕೆಗೆ ಉತ್ತರ ಬರೆದ? ಯಾವ ವಿಷಯವನ್ನು ಕುರಿತು "೩ ಪುಟಕ್ಕೆ ಹೆಚ್ಚದಂತೆ ಒಂದು ಎಸ್ಸೆ ಬರೆದ?" ಡಿಸ್ಕಸಿ, ಸೂಚಿಸಿ, ಟೀಕಿಸಿ, ಚರ್ಚಿಸಿ, ವಿಶದಪಡಿಸಿ, ಉದಹರಿಸಿ, ಎಂದು ಯಾರು ನೆಪ್ಪೋಲಿಯನ್ನನ್ನು ಪೀಡಿಸಿದರು? ಪರೀಕ್ಷೆಗಳನ್ನು ತೊಡೆದು ಹಾಕಿದರೆ, ಮಾನವನ ಭಾವಜೀವನ ರಸಜೀವನ ಇನ್ನೂ ಪುಂಖಾನುಪುಂಖವಾಗಿ ಬೆಳೆದು ಹಬ್ಬಿ ಹಸುರಿಸಿ ಪೂತು ಫಲಿಸುವುದಿಲ್ಲವೆ?

ಅಲ್ಲದೆ, ಶಾಲಾಕಾಲೇಜುಗಳಿಂದ ಪರೀಕ್ಷೆಗಳನ್ನು ನಿರ್ಮೂಲ ಮಾಡಿದರೆ, ಈ ಪದ್ಧತಿ ಇತರ ಕ್ಷೇತ್ರಗಳಿಂದಲೂ ಕಂಬಿ ಕಿತ್ತು ಮಾಯವಾಗುತ್ತದೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಕಷ್ಟವೂ ಆಗ ಪರಿಹಾರ ವಾಗುತ್ತದೆ. ಹೆಣ್ಣು ಹೆತ್ತವರ ಪಾಡೂ ಉತ್ತಮವಾಗುತ್ತದೆ. ಸ್ವರ್ಗದ ಬಾಗಿಲಲ್ಲಿ ನೂಕಾಟ ಜಾಸ್ತಿಯಾಗುತ್ತದೆ, ಸರಿ! ಆದರೂ, ಆಗ ಕೆಲಸವೇ ಇಲ್ಲದೆ ನರಕದ ಬಾಗಿಲಲ್ಲಿ ತೂಕಡಿಸುವ ಚಪ್ರಾಸಿಗಳನ್ನೆಲ್ಲ ಸ್ವರ್ಗಕ್ಕೆ ವರ್ಗಮಾಡುವುದರಿಂದ ನಾವು ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದಾಗಿದೆ—

—ಶ್ರೀಮತಿ ಕೇಸರಿ.

---

## ಆಟೊರಿಕ್ಷ

ಗೂಳಿಯ ಗುಟುರೊ? ಟಗರಿನ ನೂಕೊ?
ಸತ್ತೆ, ಕೆಟ್ಟೆ, ಎಂಬ ನುಗ್ಗಾಟ ಸಾಕೊ?
ಕಾಲಿಗರ ಕೆಡುವುತ್ತ, ಕಾರಿಗರ ಶಪಿಸುತ್ತ,
ಕೋಣನಂದದಿ, ರಿಕ್ಷ ಹೋಯಿತದಿವೇಗ!

# ಜಾತ್ರೆ—ಯಾತ್ರೆ

ಯಾತ್ರೆಯಲ್ಲಿ ಜಾತ್ರೆ! ಜಾಗರಣೆ ರಾತ್ರೆ-ಕೈಯಲ್ಲಿ ಪಾಸ್ಕ ಸೀರ್ತ್ರಜ್ಗೆ ಪಾತ್ರೆ-ಮರುದಿನ ಆಸ್ಪತ್ರೆ!

ಇದೇ ಕಾರ್ಯಕ್ರಮ ನಮ್ಮನ್ನು ಹುಂದೀಕೋಡಿನಲ್ಲಿ ಮೂರುದಿನ ಝೂಂಡಾ ಹಾಕಿಸಿತು. ಚಂದಿಗೆ ಮೊದಲೇ ಇಷ್ಟವಿರಲಿಲ್ಲ. ಮೂರನೇ ದಿನದ ಹೊತ್ತಿಗೆ ಅವನೂ ರಾಜಾ ಜೊತೆ ಸೇರಿ ನನ್ನನ್ನು ದೂರಮಾಡಿದ್ದರು. ನಾನೇ ಬೇಕಾಗಿ ಹಠಮಾಡಿ ಶಾಮರಾಯರ ಮನೆಯಲ್ಲಿ ನಿಂತೆನೆಂದು ಅವರ ವಾದ! ಯಾರೋ ಎಲ್ಲೋ ಎಂದೋ ಹೇಳಿದ್ದಾರಂತಲ್ಲಾ-ತಪ್ಪಿದ್ದರೆ ಕ್ಷಮಿಸಿ!—"ಸಜ್ಜನಾನಾಂ ಸಂಭವತಿ ಸದಾ ಸಂಕಟಃ"—ಅಂದ ಹಾಗಾಯಿತು ನನ್ನ ಪಾಡು. ಅದೇನೇ ಇರಲಿ-ಮೂರುದಿನಗಳಲ್ಲಿ ನಮಗೆ ಉತ್ಸವಗಳ ವಿಚಾರ ಜಾತ್ರೆಗಳ ವಿಚಾರ ತಿಳಿದಂತಾಯಿತು.

ನನಗೆ ಮದುವೆಗಳ ಕಾರ್ಯಕ್ರಮ ಗೊತ್ತು-ಅನುಭವಿಸಿದ್ದೇನೆ. ವರಪೂಜೆ-ಕಾಶೀಯಾತ್ರೆ-ಲಗ್ನ-ನಾಗೋಲಿ-ಬೀಗರ ಔತಣ-ಬೀಗಿತ್ತಿಯರ ಮಾರಾಮಾರಿ-ಇವೆಲ್ಲವೂ ಜಾತ್ರೆಗಳಲ್ಲಿ ದೇವರಿಗೇ ನಡೆಯುತ್ತೆ. ಮದುವೆ ಗಂಡಿಗೆ ನಡೆಯುವ ಮರ್ಯಾದೆ ದೇವರಿಗೂ ನಡೆಯುತ್ತೆ. ಮರ್ಯಾದೆಗಿಂತ ಹಿಂಸೆಯೂ ನಡೆಯುತ್ತೆ. ಉತ್ಸವ ಮೂರ್ತಿಗೆ ಪ್ರತಿಯೊಬ್ಬರೂ ಮಂತ್ರಾಕ್ಷತೆ ಎರಚಬೇಕು. ಪ್ರತಿಯೊಬ್ಬರೂ ಬಾಳೇಹಣ್ಣಿನಿಂದ ಬಾರಿಸಬೇಕು. ಆತ ಪಾಪ! ತಾನು ತಡೆಯುವಷ್ಟು ಅನುಭವಿಸಿ ಮಿಕ್ಕ ಪೆಟ್ಟನ್ನು ಪಕ್ಕದಲ್ಲಿ ಕೂತ ಅರ್ಚಕರಿಗೆ ಬಿಡುತ್ತಾನೆ. ಅಂದು ದೇವರ ಮನಸ್ಸಿನಲ್ಲಿ ಹೇಗಿರುತ್ತೋ-ಅನ್ನಿಸುತ್ತೆ ನನಗೆ. ಒಂದುವೇಳೆ ನಮ್ಮ ರಾಜಕೀಯ ನಾಯಕರ ಹಾಗೆ ದೇವರಿಗೂ ಜಂಭ ಬರುತ್ತೋ, ಅಥವಾ, ಜನರ ಹುಚ್ಚನ್ನು ನೋಡಿ ಕನಿಕರ ಬರುತ್ತೋ, ಅಥವಾ, ಅಷ್ಟೊಂದು ಹಣ್ಣುಕಾಯಿ, ಧಾನ್ಯ ಇವುಗಳು ನಾಶವಾಗುತ್ತಿರುವುದನ್ನು ನೋಡಿ ಜಿಗುಪ್ಸೆ ಹುಟ್ಟುತ್ತೋ, ಅಥವಾ ತನ್ನ ಮುಂದೂ ಕೂಡ ನಡೆಯುವ ಈ ಜಾತಿ, ಮತ, ಅಂತಸ್ತುಗಳ ಭೇದಭಾವನೆಗಳಿಂದ ಜನರ ಮೇಲೆ ಸಿಟ್ಟು ಬರುತ್ತೋ—ಯಾರು ಹೇಳುವವರು?

ದೇವರ ಮನಸ್ಸು ಹೇಗೇ ಇರಲಿ ನಮಗಂತೂ ಶಾಮರಾಯರ ಜೊತೆಯಲ್ಲಿ ಧರ್ಮಛತ್ರದ ಊಟ ಸಿಕ್ಕಿತು—ಮೂರುದಿನವೂ! ಛತ್ರದ ಊಟ—ಭೋಜನವೇ

ಸರಿ! ಬೋರೇಗೌಡ ಬೆಳೆದ ಅಕ್ಕಿ ಮೃಷ್ಟಾನ್ನ, ತಿಮ್ಮನಾಯ್ಕ ಕುಟ್ಟಿಸಿದ ಬೇಳೆ ತೊವ್ವೆ, ಬೈರಪ್ಪ ಬೇಯಿಸಿದ ಬೆಲ್ಲದ ಪಾಯಸ, ಕೂಕ್ತ ಅರ್ಪಿಸಿದ ಹಣ್ಣುಕಾಯಿ ಹೋಳಿಗೆ, ರಸಾಯನ—ಅಯ್ಯೋ; ನಾವೂ ದನದಹಾಗೆ ಮೆಲುಕು ಹಾಕುವುದಿದ್ದರೆ ಎಷ್ಟು ಚೆನ್ನಾಗಿತ್ತು! ಮೂರು ದಿನಗಳ ವೈಭವ ನಡೆಸಿಕೊಂಡು, ದೇವರು ವರ ಕರುಣಿಸಿದ-ತಿಂದವರಿಗೆ ಅಜೀರ್ಣ, ತಂದವರಿಗೆ ನಿತ್ರಾಣ! ಜಾತ್ರೆಯಲ್ಲಿ ವ್ಯಾಪಾರ ವಂತೂ ಹೇಳತೀರದು. ಬೇಕಾದ ಸಾಮಾನು ಇಲ್ಲದಿರುವಾಗ ಬೇಡವಾದ್ದನ್ನೇ ಮಾರಿದರು-ಸಂತೇಲಿ. ಯಾವುದಾದರೊಂದು ಸಾಮಾನು ಸಿಗುತಲ್ಲಾ ಅಂತ ಬೇಡ ವಾದ್ದನ್ನೇ ಕೊಂಡರು-ಯಾತ್ರಿಕರು. ಜಾತ್ರೆಯಲ್ಲಿ ವ್ಯಾಪಾರ ಮಾಡುವುದೇ ಒಂದು ಗತ್ತು! ಒಂದು ಕಾಸಿನದಿರಲಿ, ರೂಪಾಯಿನದಿರಲಿ—ಅಲ್ಲಿ ಕೊಳ್ಳುವ ಸಾಮಾನಿನ ಬೆಲೆ ಏರಾವುದಕ್ಕೂ ಇಲ್ಲ. ಎಷ್ಟೋ ವ್ಯಾಪಾರಸ್ಥರು ತಮ್ಮ ದಿನಚರಿ ಅಂಗಡಿಯಲ್ಲಿ ಹಾಳಾಗಿರುವ ಸಾಮಾನನ್ನು ಜಾತ್ರೆಯಲ್ಲಿ ನಫೆಗೆ ಮಾರುತ್ತಾರೆ. ಚಿಕ್ಕ ಚಿಕ್ಕ ಜಾತ್ರೆಗಳಲ್ಲಂತೂ ಅವು ಬಿಟ್ಟರೆ ಬೇರೆ ಸಾಮಾನೇ ಇಲ್ಲ! ಆದರೆ ಎಲ್ಲವೂ ದೇವರ ಸೇವೆಯಾದ್ದರಿಂದ ಯಾವುದೂ ಪಾಪವಿಲ್ಲ! ಬ್ರಹ್ಮಸೃಷ್ಟಿಯ ಜೊತೆಗೆ ವಿಶ್ವಾಮಿತ್ರ ಸೃಷ್ಟಿಯೂ ಬಿಕರಿ ಆಗುತ್ತೆ.

ಜಾತ್ರೆ ಮುಗಿದಮೇಲೆ ಶಾಮರಾಯರನ್ನು ವಂದಿಸಿ ಆ ಊರು ಬಿಟ್ಟೆವು. ಹೊರಡುವುದಕ್ಕೆ ಮುಂಚೆ ಚಂದಿಯನ್ನು ಕೇಳಿದೆ—'ಬೇರೆ ಯಾರಾದರೂ ನೆಂಟರು, ಹತ್ತಿರದ ಊರುಗಳಲ್ಲಿದ್ದಾರೆಯೆ?'—ಅಂತ. ಅದಕ್ಕೆ ಚಂದಿ ಮಾತಾಡಲಿಲ್ಲ. ನನ್ನನ್ನು ಒಂದು ಬಾರಿ ದುರುಗುಟ್ಟಿ ನೋಡಿದ-ನೋಟದಲ್ಲಿ ಇಡೀ ಅಮರಕೋಶವೇ ಅಡಕವಾಗಿತ್ತು!

ಅಂದು ರಾತ್ರಿ ಬೈಲೂರು ಸೇರಿದೆವು. ಆ ಊರಿನ ಶಾಲೆಯಲ್ಲೇ ರಾತ್ರಿಯಲ್ಲಿ ಇಳಿದುಕೊಳ್ಳುವುದಕ್ಕೂ ಅನುಕೂಲವಾಯಿತು. ನಾವು ಬೈಲೂರಿಗೆ ಸೇರಿದಾಗ ಆ ಊರಿನ ಒಲಿತವರಿಗೆ ಹಿಂದೀ ಶಿಕ್ಷಣ ನಡೆಯುತ್ತಿತ್ತು-ಶಾಲೆಯಲ್ಲಿ ನಾವೂ ಕೂತೆವು ಹಿಂದೀ ವ್ಯಾಕರಣ ಬಹಳ ರಸವತ್ತಾಗಿ ಜರುಗುತ್ತಿತ್ತು. ಹಿಂದೀ ಓದಿ ದವರಿಗೆ ಗೊತ್ತು-ಹಿಂದೀ ವ್ಯಾಕರಣದ ಕಷ್ಟ! ಆ ವ್ಯಾಕರಣ ಬರೆದಾತ, ಅದನ್ನು ರಚಿಸುವಾಗ ಯಾವ ಕಷ್ಟದಲ್ಲಿ ಸಿಕ್ಕಿದ್ದನೋ ನನಗೆ ತಿಳಿಯದು. ಪ್ರಾಯಶಃ ಆತನಿಗೂ ಆತನ ಮಡದಿಗೂ ರಾದ್ಧಾಂತ ನಡೆಯುತ್ತಿರಬಹುದು, ಅಥವಾ ಯಾವುದೋ ಮಾರ್ವಾಡಿ, ಪಠಾಣನ ಕೈಲಿ ಸಿಕ್ಕಿ ನರಳುತ್ತಿರಬಹುದು, ಅಥವಾ ರಾಜಕೀಯದಲ್ಲಿ ನುಗ್ಗಿ ರೇವಣಾತಿ ಹಣಕಳೆದುಕೊಂಡಿರಬಹುದು-ಅಂತೂ ಆತನ ಬುದ್ಧಿ ಆತನ ತಲೆಯಲ್ಲಿರಲಿಲ್ಲವೆನ್ನಬಹುದು. ನನ್ನ ಮಟ್ಟಿಗೆ ಹೇಳುವುದಾದರೆ ಕನ್ನಡವೇ ಕಸ್ತೂರಿ! ನಾನು ಸಂಸ್ಕೃತಕ್ಕೂ ಶಾಂತಿ ಮಾಡಿದ್ದೇನೆ. ಸಂಸ್ಕೃತ ವ್ಯಾಕರಣ ನನಗೆ ಕಲಿಸುವುದರಲ್ಲಿ ನಮ್ಮ ಪಂಡಿತರಿಗೆ ಅರ್ಧ ಮರೆತು ಹೋಗಿತ್ತು!

ಕಡೆಗೆ ಅವರಿಗೂ ನನ್ನ ತೀರ್ಥರೂಪರವರಿಗೂ ಭೇಟಿಯಾಗಿ ನನಗೂ ಸಂಸ್ಕೃತಕ್ಕೂ ಪರಸ್ಪರ ಮಾನ ಉಳಿಯಬೇಕಾದರೆ ನಮ್ಮಿಬ್ಬರನ್ನೂ ಬೇರೆ ಮಾಡುವುದೇ ಒಳ್ಳೆಯ ಉಪಾಯವೆಂದು ನಿರ್ಧರಿಸಿದ್ದರು. ಇನ್ನು ಇಂಗ್ಲಿಷ್ ವ್ಯಾಕರಣ!—ಯಾವ ಭೂತ ಅದನ್ನು ನಿರ್ಮಾಣ ಮಾಡಿತೋ ಅದಕ್ಕೇ ಪ್ರೀತಿ. ಸಿರಿಗನ್ನಡಂಗೆಲ್ಗೆ!

ನಾನು, ರಾಜ, ಚಂದಿ, ಹಿಂದೆ ಹಿಂದಿ ಕಲಿಯುಕ್ಕೆ ಪ್ರಯತ್ನ ಮಾಡಿದೆವು. ಇದೇ ವ್ಯಾಕರಣದ ಗಲಾಟೆಯಲ್ಲೇ ನಮಗೂ ಹಿಂದೀ ಉಪಾಧ್ಯಾಯರಿಗೂ ಮನಸ್ತಾಪ ಬಂದು ನಮ್ಮ ಶಿಕ್ಷಣ ಬಂದ್ ಮಾಡಿದೆವು. ಮನಸ್ತಾಪಕ್ಕೆ ಶುರು ಅಂದರೆ,-ಒಂದು ಬಾರಿ ಉಪಾಧ್ಯಾಯರು ಹೇಳಿದರು "ಇ" ಕಾರಾಂತ ಶಬ್ದವೆಲ್ಲಾ ಸ್ತ್ರೀಲಿಂಗ-ವೆಂದು. ಆಗ ಚಂದಿಗೆ ಅಸಮಾಧಾನವಾಯ್ತು. ಅಂದಿನಿಂದ ಅವನೂ ರಾಜ ಇಬ್ಬರೂ ಪಾಠನಡೆಯುತ್ತಿರುವಾಗ ಚುಕ್ಕೆ ಆಟಕ್ಕೆ ಶುರುಮಾಡುತ್ತಿದ್ದರು. ಒಂದುದಿನ ಉಪಾಧ್ಯಾಯರು ಹಠಾತ್ತಾಗಿ ಚಂದೀನ-"ಅಶೋಕ್ ಏಕ್‌ರಾಜಾಥಾ" ಇದಕ್ಕೆ ಕನ್ನಡದಲ್ಲಿ ಅರ್ಥ ಕೇಳಿದರು. ಅದಕ್ಕೆ ಚಂದಿ, ರಾಜನ ಮುಖ ನೋಡುತ್ತಾ- "ರಾಜನಿಗೆ ಯಾವ ಶೋಕವೂ ಇಲ್ಲ"-ಅಂದ. ಉಪಾಧ್ಯಾಯರಿಗೆ ಸ್ವಲ್ಪ ಅಸಮಾಧಾನವಾಯಿತು.

ಆದರೂ ನಾವು ಹಿಂದೀನ ಪೂರ್ತಿಯಾಗಿ ಬಿಡುವುದಕ್ಕೆ ಕಾರಣವೇನೆಂದರೆ, ಉಪಾಧ್ಯಾಯರು.

"ಸೀತಾ ಸೀತಿ ಹೈ"—ಇದಕ್ಕೆ ಅರ್ಥ ಕೇಳಿದಾಗ--

ಚಂದಿ ಹೇಳಿದ-"ಸೀತೆಯು ಸೀತೆಯೇ" ಅಂತ. ರಾಜ ಎಂದ್ದು ಚಂದಿಯನ್ನು ಹಂಗಿಸಿ—

"ಸೀತೆಯು ಸ್ತ್ರೀ ಆದ್ದರಿಂದ 'ಸೀತಿ' ಅನ್ನಬೇಕು" ಅಂದ.

ನನ್ನ ಸರದಿ ಬಂತು ಚಂದಿ ರಾಜ ಇಬ್ಬರೂ ಸುತರಾಮ್ ಮನೆಪಾಠ ಮಾಡಿದವರಲ್ಲ. ಆದ್ದರಿಂದ ಅವರು ತಪ್ಪಾಗಿ ಹೇಳಿದ್ದು ನನಗೇನೂ ಆಶ್ಚರ್ಯವಾಗಿರಲಿಲ್ಲ. ನಾನು ಸರಿಯಾಗಿ ಯೋಚಿಸಿ—

"ಸೀತೆಗೆ ಶೀತವಾಗಿದೆ" ಅಂದೆ.

ಆಗ ಮಿಕ್ಕವರೆಲ್ಲಾ ನಕ್ಕರು. ರಾಜ ಚಂದಿ ಕೈಚಪ್ಪಾಳೆ ತಟ್ಟಿದರು. ಉಪಾಧ್ಯಾಯರು ತಲೆ ಚಚ್ಚಿಕೊಂಡರು.

ಆಮೇಲೆ ತಿಳಿಯಿತು--'ಸೀತಾ ಸೀತೀ ಹೈ'-ಅಂದರೆ 'ಸೀತೆಯು ಹೊಲಿಯುತ್ತಾಳೆ'-ಅಂತ.

ಬೈಲೂರಿನ ಹಿಂದಿಯೂ ಅದೇರೀತಿ ನಡೆದು-ಬಾಲಕರೂ ಉಪಾಧ್ಯಾಯರೂ, "ಹೈ" ಅನ್ನುವುದನ್ನು ಬಾಯಿನಲ್ಲಿ ಹೇಳುವುದಕ್ಕೂ, ಮೂಗಿನಲ್ಲಿ ಹೇಳುವುದಕ್ಕೂ ವ್ಯತ್ಯಾಸದ ಬಗ್ಗೆ ಚರ್ಚೆ ನಡೆಸುತ್ತಾ-ಶಾಲೆ ಬಿಟ್ಟರು.

ನಮಗೂ ಶಾಂತಿ ಲಭಿಸಿತು.

—ಕೇಫ.

---



ನಮ್ಮಣ್ಣನ ಹೋದ ವರ್ಷದ ಡಿರಸನ್ನು ನಾನು ಹಾಕಿ ನಿಂತುಕೊಂಡರೆ—ಯಾರಿಗೂ ಪತ್ತೇನೇ ಆಗಲಿಲ್ವಲ್ಲಾ !

# ನಮ್ಮೂರು ಮೇಷ್ಟರು

---

ನಮ್ಮ ಊರಿಗೆ ಮೊನ್ನೆತಾನೆ ಒಬ್ಬರು ಹೊಸ ಮೇಷ್ಟರು ಬಂದರು! ಹೊಸ ಸ್ಕೂಲಿಗೆ. ನಮ್ಮ ಊರಿನವರು ಹೊಸಬರನ್ನು ನೋಡೇ ಇಲ್ಲ. ನಮ್ಮೂರಿಂದ ನಮ್ಮ ಹುಡುಗರು ಬೇರೆ ಊರಿಗೆ ಹೋಗಿ ಅಲ್ಲೇ ನೆಲೆಸಿಬಿಡುತ್ತಾರೇ ಹೊರತು, ಪರಸ್ಥಳದಿಂದ ನಮ್ಮೂರಿಗೆ ಬಂದು, ನಮ್ಮೊಡನೆ ವಾಸಮಾಡುವ ಸಾಹಸವನ್ನು ಇದುವರೆಗೂ ಯಾರೂ ಮಾಡಿರಲಿಲ್ಲ.

ಅದೂ ಅಲ್ಲದೆ, ಹೊಸ ಮೇಷ್ಟರು ಅದೇಂಥದ್ದೋ ಎಸ್. ಎಸ್. ಎಲ್. ಸಿ. ಎಂಬೋ ಪಾಸು ಮಾಡಿದವರು ಅಂತ ಬೇರೆ ಸುದ್ದಿ ಬಂತು. ನಮ್ಮೂರು ಪಟೇಲರ ಭಾವಮೈದುನ ಎಷ್ಟೋ ಪಾಸಿಗೆ ಅಂತ ಹೋಗಿ, ಎಷ್ಟೋ ಸಿಗದೆ ಮನೆಯಲ್ಲಿ ಕೂತು ಬಿಟ್ಟನಂತೆ, ಹಾಸನದಲ್ಲಿ. ಅಂಥದ್ದರಲ್ಲಿ, ಈ ಮಹರಾಯ ಎಸ್ಸೆಸ್ಸೆಲ್‌ಸಿ ಎಂಬ ಹೊಸ ಪ್ರಾಣಿ ಪಾಸಿಗೆ ಹೋಗಿ, ಆ ಪ್ರಾಣೀನ್ನೂ ಪಡೆದು ಬಂದಿದಾನೆ ಎಂದರೆ, ಎಂತಹ ಮೃಗ ಆತ, ಅಂತ ನಾವೆಲ್ಲರೂ ರಸ್ತೆ ಉದ್ದಕ್ಕೂ ಕಾದು ನಿಂತು, ಹೂವಿನ ಹಾರ ಹಾಕಿ, ಲಿಂಬೀಹಣ್ಣು ಕೊಟ್ಟದ್ದರಲ್ಲಿ ಆಶ್ಚರ್ಯವೇನು ?

ಫರಂಗಿ ಟೋಪಿಗೆ ನೀಲಿ ಗೌಸ್ ಹಾಕಿಕೊಂಡಿದ್ದರು ಮೇಷ್ಟರು. ನಮಗೆಲ್ಲ ರಿಗೂ ಮಾತನಾಡಿಸುವುದಕ್ಕೆ ಗಾಬರಿಯಾಗಿ ಹೋಯಿತು. ಮಂತ್ರಿಗಳೊಬ್ಬರ ಭಾವಮೈದುನನ ಜೊತೆಯಲ್ಲೋದಿದವನು, ಅವರಿಬ್ಬರಿಗೂ ತುಂತುಂಬಾ ದೋಸ್ತಿ, ಅಂತ ಬೇರೆ ಸುದ್ದಿ ಹರಡಿಸಿದರು. ಆತನ ಕಾಲಿಗೆ ಬೀಳೋದೊಂದು ಬಾಕಿ ನಾವುಗಳು. ಆ ಕಾಲಿಗೆ ಬೇರೆ....ಅರ್ಧ ಬಿಳಿ, ಅರ್ಧ ಕರಿ, ಉದ್ದಕ್ಕ ಜಡೆ ಹೆಣೆದಿದ್ದ ಎಂಥದ್ದೋ ತರಹ ಷೂನಂತೆ, ಅದನ್ನ ತೊಡಿಸಿದ್ದರು. ಅಂಥದ್ದು, ಹನ್ನೆರಡು ಜೊತೆ ಖರ್ಚಾಗಿ ಹೋಯಿತು ನಮ್ಮೂರಲ್ಲಿ, ಮೂರು ತಿಂಗಳಿಗೆ.... ಆತನೇ ತರಿಸಿಕೊಟ್ಟ.

ಜೊತೆಯಲ್ಲೊಂದು ಇಸ್ಪೀಟು ಪ್ಯಾಕೆಟ್ ಬೇರೆ ರವಾನಿಸಿದ್ದರು, ಅವರು ನಮ್ಮ ಹಳ್ಳಿಗೆ. ಅದನ್ನ ಕಲಸಿ ಹಂಚಿ ಬೆಲೆ ಕಟ್ಟಿ, ಬಾಜಿ ಬೆಳೆಸಿ, ತಂತಮಾಷೆ ಆಟಗಳಾಡಿಸಿದರು, ವಯಸ್ಕರ ಶಿಕ್ಷಣ, ಎಂಬ ಹೆಸರಿನಲ್ಲಿ, ಅವರು ನಮಗೆಲ್ಲ. ಲಾಯರಿ ಬೇರೆ ಬರೋದು, ಅವರಿಗೆ. ತೆಪ್ಪಗೆ, ಸ್ವಾರಸ್ಯವೇನೂ ಇಲ್ಲದೆ, ಸದ್ದು

ಮಾಡದೆ ಬಿದ್ದಿದ್ದ ಹಳ್ಳಿಯವರನ್ನು ಅವರು ತಿವಿದು ಎಬ್ಬಿಸಿ, ಪೈಪೋಟಿ ಬೆಳೆಸಿ, ಕೋರ್ಟು ಕಚೇರಿ ಬಾಗಿಲು ಕಾಯಿಸಿ, ಪಟ್ಟಣಗಳಲ್ಲಿನ ಮಸಾಲೆ ದೋಸೆ ರುಚಿ ತೋರಿಸಿ, ಎಲ್ಲರ ತಲೆಯ ಮೇಲೂ ಮೆಣಸು ಅರೆದರು. ಊರಿನವರಿಗೆಲ್ಲ ಬಾಯಿ ತುಂಬ ಮಾತು ಬಂತು, ಚಾಡಿ ಬೈಗುಳ, ಕ್ರೋಧ, ದೂರು, ಅರ್ಜಿ, ಪಿಟಿಷನ್, ಬಿನ್ನವತ್ತಳೆ ಇತ್ಯಾದಿಯಿಂದ ನಮ್ಮ ಹಳ್ಳಿ ಕಳಕಳಿಸಿತು.

ಮಂತ್ರಿ ಸಂಬಂಧ ಅಂದ ಮೇಲೆ ಅವರನ್ನ ತನಿಖೆ ಮಾಡೋದೆಂದರೇನು? ಜಾತಿ ನಮ್ಮದಾದ ಮೇಲೆ ನಾವು ಅವರ ಮೇಲೆ ಟೀಕೆ ಮಾಡೋದು ಹೇಗೆ? ಊರಿನ ಪುಂಡರೆಲ್ಲ ಆತನ ಪರ ಎಂದ ಮೇಲೆ, ಹುಡುಗರಿಗೆ ಅವರು ಎಂಥ ಪಾಠ ಕಲಿಸಿಯಾರು? ಮದುವೆಯಾಗದ ಹುಡುಗ, ಎಂಬ ಸಮಾಚಾರ ತಿಳಿಯುತ್ತಲೂ, ಹೆಣ್ಣು ಹೆತ್ತವರೆಲ್ಲ ಅವರ ಪಕ್ಷ.

ಹೀಗಾಗಿ, ಈಗ ನಮ್ಮೂರು ತುಂಬ ಅವರದೇ ಸ್ತೋತ್ರ. ನಮ್ಮೂರಿನ ೩೫೦ ಓಟುಗಳೂ ಅವರ ಕಿಸೆಯಲ್ಲೇ ಇದೆ; ಅವರು ಎತ್ತಕಡೆ ವಾಲುತ್ತಾರೋ ಅತ್ತಕಡೆಯೇ ಅವೂ ಉದುರುತ್ತವೆ, ಎಂದು ಅವರು ಜಂಬ ಕೊಚ್ಚಿಕೊಳ್ಳುತ್ತಿದಾರೆ; ಆ ಜಂಬವನ್ನೇ ಮೇಲಿನವರೂ ನಂಬಿ ಮೌನವಾಗಿದ್ದಾರೆ.

—ಕಾಮತ್.

---

೪. ಅರಿತವರಿಗೆ ಅರವತ್ತು, ಮರೆತವರಿಗೆ ಮೂವತ್ತು,
ಮತ್ತೈದು ಗ್ರೇಸಿತ್ತು, ಅವನನೂ ಪಾಸೆಂದು
ಸಾರಿ ಹೊರನೂಕುವರು, ಸರ್ವಜ್ಞ.

೫. ಎಂದು ಬಂದಾನೆಂದು ಸಂದೇಹ ಪಡಬೇಡ
ಅಂದವಳು ಬರೆದ ಕಾಗದಕೆ, ಆ ಗಂಡ
ಅಂದೆ ಬಂದಾನು, ಸರ್ವಜ್ಞ.

೬. ಕ್ಲಬ್ಬಿನಲಿ ಕೊಬ್ಬದಿರು, ಉಬ್ಬಿ ಟೇಲ್ ಬಿಚ್ಚದಿರು,
ರುಬ್ಬದಿರು, ಗ್ರೇನೆದುರು ರಬ್ಬದಿರು.... ಇವು ನಾಲ್ಕು
ಗಬ್ಬು ಜನರಾ ರೀತಿ, ಸರ್ವಜ್ಞ.

# ಆ ಚಿಂತೆ ಈ ಚಿಂತೆ

## (ಎಂಬೊಂದು ಮೇಳಗೀತೆ)

ಮೇಳ-(ತೆರೆಯೆದ್ದ ಮೇಲೆ)
ಮದುವೆಯಾಗುವ ಮೊದಲು
ಅವನಿಗೊಂದೇ ಚಿಂತೆ, ತನ್ನನಲ್ಲೆ
ತನ್ನ ಕೈಹಿಡಿವ ನಲ್ಲೆ
ರೀಟ ಹೇವರ್ತಳಂತಿಲ್ಲ.

ಅವಳಿಗೆಲ್ಲವು ಒಪ್ಪು, ಒಂದ ನುಳಿದು
ತನ್ನ ಕೈಹಿಡಿವನಲ್ಲ
ಅವನಿಗಿಲ್ಲ
ಗ್ರಿಗರಿ ಪೆಕ್ಕನ ರೂಪ
ಅದೆ ಅವಳ ತಾಪ.

ಆದ ಮೇಲೆ—

ಅವಳಿಗಾಯಿತು ಚಿಂತೆ-ತನ್ನ ಕಾಂತ
ಅವನ ಪ್ರೇಮಕೆ ಇಲ್ಲ ಅಂತ
ಆದರವನಿಗೆ ಚಿಂತೆ ಏನೋ ಚಿಂತೆ
ಆಭೂತ ಹಿಡಿದು
ದಿನ ದಿನಕೆ ಸಣ್ಣಾಗಿ ನವೆಯುತಿಹನಂತೆ.

ಅವನಿಗೊಂದೇ ಚಿಂತೆ-ತನ್ನ ಭಾವದರಾಣಿ
ತನ್ನ ಕೈಹಿಡಿದ ಕಟ್ಬಾಣಿ
ಎಲ್ಲಸರಿ ಎಲ್ಲಸರಿ, ಆದರೊಂದೇ ಕೊರತೆ
ಅಡಿಗೆ ಮಾಡುವ ರೀತಿ ಅವಳರಿಯಳಲ್ಲ.
ಇನ್ನೇನು ಇಲ್ಲ.

ಇಂತವರ ಚಿಂತೆ—

ಆಗಲು ಈಗಲು ಇದೆ ಚಿಂತೆ
ಎಂದೆಂದೂ ಚಿಂತೆ
ಇದಕೆಂದಂತ-ಲೋಕ ದುರಂತ
ನಾವೀ ನಾಟಕದಲ್ಲಿ
ನಾಯಕರಲ್ಲ-ಬರಿಯ ವಿದೂಷಕರು.

—ಅ. ರಾ. ಸೇ.

# ದಾಮೋದರನ ದೌರ್ಭಾಗ್ಯ

---

"ಆ ಹ ಹ ಹ ...ಇಲ್ಲಿ ತಣ್ಣಗೆ ಗಾಳಿ ಬೀಸ್ತಾಯಿದೆ—ಬೀಸಾಗೇ ಇದೆ ಮನೆ ಪರವಾಗಿಲ್ಲ" ಎಂದು ವಿಠ್ಠಲರಾಯರು ಆರಾಮಾಸನದಲ್ಲಿ ಮಂಡಿಸಿದರು. ಡಾ|| ದಾಮೋದರರು ಕೂಡುವ ಪ್ರಿಯವಾದ ಆರಾಮ ಕುರ್ಚಿ ಅದು. ಮಾವಯ್ಯನವರು ಮಂಡಿಸಿರುವಾಗ ಹೇಗೆ ಏಳಿ ಎಂದೆನ್ನುವುದು? ರುಕ್ಕು ಅವಳ ಅಪ್ಪನ ಪಕ್ಕದಲ್ಲೇ ಇದ್ದ ಕುರ್ಚಿಯಲ್ಲಿ ಕುಕ್ಕರಿಸಿದ್ದಳು. ರುಕ್ಕು ಅಲ್ಲಿದ್ದ ಮೇಲೆ ಡಾ|| ದಾಮೋದರರು ಹೇಗೆ ಅಲ್ಲಿ ಸುಳಿದಾಡುವರು? ನಾಚಿಕೆ ಪಾಪ. ಭಾವಿ ಮಾವ, ಭಾವಿ ಪ್ರಿಯ-ಸತಿ ಭಾವವೈದುನನ ಕಾಟವಿಲ್ಲ, ಬೀಸಾದ ಮನೆ ಹಾಯಾಗಿ ಚಕ್ಕಂದವಾಗಿರಬಹುದು ಮದುವೆಯಾದ ಮೇಲೆ ಎಂದೆಂದುಕೊಂಡು, ಹೊರ ರೂಮಿನ ಬಾಗಿಲಿನ ಸಂದಿನಿಂದ ನಡುಮನೆಯಲ್ಲಿ ಮಂಡಿಸಿದ ಮೋಹನಾಂಗಿ ರುಕ್ಕುವಿನ ಉಬ್ಬು ಎದೆಯನ್ನು ಕದ್ದು ನೋಡುತ್ತಿದ್ದ ಡಾ|| ದಾಮೂ.

ಭಾವಿ ಮಾವಯ್ಯ ವಿಠ್ಠಲರಾಯರು ಮಗಳ ಮದುವೆಯ ಯೋಚನೆ ನಿರಾತಂಕವಾಗಿ ಅಂತ್ಯವಾದದ್ದಕ್ಕೆ ಮನಸ್ಸು ಅವರು ಹಾಲಿ ಇದ್ದ ಮನೆಯ ಮುಂದಿನ ಬೋರ್ಡು "ಇಲ್ಲಿ ಅರ್ಜಿ ವಗೈರೆ ಬರೆದು ಟೈಪ್ ಮಾಡಲ್ಪಡುತ್ತವೆ— ಮತ್ತು ವಕಾಲತ್ತು ವಹಿಸಿಕೊಳ್ಳಲಾಗುತ್ತದೆ" ಎಂಬುದನ್ನು ಸಧ್ಯದ ಮನೆಯಲ್ಲಿ ಯಾವ ಗೋಡೆಗೆ ನೇತುಹಾಕಬೇಕು? ಎಂಬುದರ ಕಡೆ ಹರಿದೋಡಿತ್ತು.

ಗಂಭೀರವಾಗಿ ಮಗಳ ಕಡೆ ನೋಡಿದರು. ಮಗಳು ರುಕ್ಕು ಹೊರ ರೂಮಿನ ಬಾಗಿಲ ಸಂದಿನಲ್ಲಿ ಹೊಳೆಯುವ ಕಣ್ಣುಗಳನ್ನು ನೋಡುತ್ತಿದ್ದಳು. ಅವಳ ಕೆನ್ನೆಯಲ್ಲಿ ರಕ್ತ ಸಂಚಾರ ಹೆಚ್ಚಾಗಿ ಕಪ್ಪಿನಲ್ಲೂ ಕೆಂಚಾಗಿತ್ತು. ಉದ್ದವಾದ ನಾಶಿಕದ ಹೊಳ್ಳೆಗಳು ಭಾರವಾದ ಉಸುರಾಟದ ರಭಸಕ್ಕೆ ಅಲುಗುತ್ತಿದ್ದುವು. ಎಡಹುಬ್ಬನ್ನು ಏರಿಸಿ ನೋಡಿದ ವಿಠ್ಠಲರಾಯರು ಕ್ಷಣಮಾತ್ರದಲ್ಲಿ ಈ ಪ್ರೇಮಿಗಳ ಮನೋಗತವನ್ನು ಅರ್ಥಮಾಡಿಕೊಂಡು, ಸ್ವಾರ್ಥದ ಬೋರ್ಡಿನಿಂದ ಮಗಳ ಮದುವೆ ಮೊದಲು ಆಗಬೇಕೆಂಬುದರ ಕಡೆ ಮನಸ್ಸು ಓಡಿಸಿದರು.

"ರುಕ್ಕೂ ನೀನು ಒಳಕ್ಕೆ ಹೋಗು" ರುಕ್ಕು ಒಳಗಿನ ರೂಮಿಗೆ ನಿಷ್ಕ್ರಮಣ.

"ಡಾಕ್ಟ್ರೇ ಸ್ವಲ್ಪ ಬರ್ತೀರ ಇಲ್ಲಿಗೆ" ಪ್ರವೇಶ ಡಾ॥ ದಾಮೋದರ್.

"ಬನ್ನಿ ಹೀಗೆ ಈಕಡೆ ಈ ಕುರ್ಚಿ ಮೇಲೆ ಕೂಡಿ" ದಾಮೋದರರು ಕುಕ್ಕರಿಸಿದರು. ವಿಠ್ಠಲರಾಯರು ನಗುನಗುತ್ತಾ ನೋಡಿದ್ದರೂ ಅವರು ಕಾಳಿಂಗನಂತೆ ಕಣ್ಣು ಹಾಯಿಸಿದ್ದರು. ದಾಮೋದರರು ಕಪ್ಪೆಯಂತೆ ಕಣ್ಣು ಬಿಟ್ಟರು. ಚೂಪಾದ ನಾಲಿಗೆ ಎರಡು ಸಲ ಹೊರಕ್ಕೆಳದು ತುಟಿಯ ಮೇಲಾಡಿಸಿದಾಗ ದಾಮೋದರರು ಉಗುಳುನುಂಗಿದರು.

"ಯಳಂದೂರಿಗೆ ಕಾಗದ ಬರೆದು ನಿಮ್ಮ ತಾಯಿ ಅರ್ಥಾತ್ ನನ್ನ ಬೀಗಿತ್ತಿಯನ್ನು ಕರೆಸಿದರೆ ಬೇಗ ಕನುಕೊಂಟೆನಿ ಊದಿಸಿಬಿಡಬಹುದು."

"ನಮ್ಮ ತಾಯಿಗೆ ಕನುಕೊಂಟೆನಿ ಊದಲಿಕ್ಕೆ ಬರೋಲ್ಲಾಂತ ಕಾಣುತ್ತೆ."

"ಇಲ್ನೋಡ್ರೀ ದಾಮೋದರರೆ, ನೀವು ಮಾತು ಇನ್ನೂ ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳೋದು ಕಲೀಬೇಕು. ಕನುಕೊಂಟೆನಿ ಊದಿಸೋದೂಂದ್ರೆ ನೀವು ರುಕ್ಕುವಿಗೆ ಕೈಕೊಟ್ಟು, ಅಗ್ನಿಕುಂಡದ ಸುತ್ತ ಸುತ್ತುವ ಸಂಭ್ರಮದ ಸಂದರ್ಭ ನಡೆದು ಹೋಗಲೀಂತ...."

"ಹಿ ಹಿ ಹಿ ಹಿ ... ಹಾಗೋ .... ನಾನೇ ಅಲ್ಲಿಗೆ ಹೋಗಿ ಕರ್ಕೊಂಡು ಬರ್ತೀನಿ ಅಮ್ಮನ್ನ"

"ಛೆ! ಅದೇ ತಪ್ಪು" ಎಂದು ಮಹಾ ಅನ್ಯಾಯ ನಡೆದಂತೆ ಗುಡುಗಿದರು ವಿಠ್ಠಲರಾಯರು. ಏನು ಪ್ರಮಾದವಾಯಿತೋ ಎಂದು ಹೆದರಿಯೇ ಬಿಟ್ಟರು ದಾಮೂ.

"— ಒಂಭತ್ತು ಕಾಸ್ನಲ್ಲಿ ಆಗೋ ಕೆಲಸಕ್ಕೆ ಒಂಭತ್ತು ರೂಪಾಯಿ ತೆರಬೇಕೆ? ....ಡಾ॥ ದಾಮೋದರರೆ ನೀವು ನಿಷ್ಣಾತ ವೈದ್ಯರಿರಬಹುದು, ಆದರೆ ವ್ಯವಹಾರದಲ್ಲಿ ಇನ್ನೂ ಪಳಗಬೇಕು—ಅಲ್ರೀ ಯಳಂದೂರಿಗೆ ನಾಲ್ಕಕ್ಷರ ಗೀಚಿ ಹಾಕ್ರಿ "ತಕ್ಷಣ ಹೊರಟು ಬರತಕ್ಕದ್ದು ನನ್ನ ಖಾಯಿಲೆ ಸಂಪೂರ್ಣ ಗುಣವಾಗಿದೆ—ಬಾರದಿದ್ದರೆ ನಾನು ಬದುಕದಿರಬಹುದು ಇತಿ ನಮಸ್ಕಾರ" ಇಷ್ಟು ಬರೀರಿ ಸಾಕು...."

"ನಿಜ ವ್ಯವಹಾರ ಮಾಡೀ ನನಗೆ ಅಭ್ಯಾಸವಿಲ್ಲ—ಅದೆಲ್ಲ ಸರಿ, ಆದರೆ ವಾಸಿಯಾಗೋಕೆ ನನಗೇನು ಖಾಯಿಲೆಯಾಗಿತ್ತು—ಅವರು ಬರದೆ ಇದ್ರೆ ನಾನು ಬದುಕದೆ ಇರಬಹುದೂಂದ್ರೆ ನನಗೆ ಅರ್ಥವಾಗದಂಥ ಒಗಟು ನಿಮ್ಮ ಮಾತು...."

"ಹಹ್ಹ ಹಹ್ಹ....ರುಕ್ಕೂ ಎರಡು ಲೋಟ ಸೊಗಸಾದ ಪರಬತ್ತು ಮಾಡ್ಕೊಂಡು ಬಾಮ್ಮ"

"ನಂಗೆ ಬೇಡ ಮಾವಯ್ಯ"

"ರುಕ್ಕೂ ಒಂದೇ ಲೋಟ ಸಾಕು—ಡಾಕ್ಟ್ರಿಗೆ ಬೇಡವಂತೆ.....ನಾನೇನು ಹೇಳ್ತಿದ್ದೇ....ಹೂಂ—ನೀವು ಬರಿಯೋ ಕಾರ್ಡಿನ ವಕ್ಕಣಿಕೆ ವಿಚಾರ ಅಲ್ವೆ.... ನಿಮಗಿದ್ದ, ಸರಿಯಾದ ಸತಿ ಸಿಕ್ಕಲಿಲ್ಲಾನ್ನೊ ಖಾಯಿಲೆ ರುಕ್ಕು ಸಿಕ್ಕಿ ವಾಸಿಯಾಗ ಲಿಲ್ವೆ ? .. ಹೇಳ್ರೀ ..."

"ಹೂಂ . ಹೌದು"

"ಆಮೇಲೆ— ಈಗ ನಿಮ್ಮ ತಾಯಿ ಬೇಗ ಬಂದು ಅರ್ಧಾಂಗ ಅರ್ಧಾಂಗಿಯರ ಮಧ್ಯೆ ಅಂತರ ಪಟ ಹಿಡಿದು ಅಕ್ಕಿಕಾಳು ಬೀಳೋ ಹಾಗೆ ಮಾಡದೆ ಇದ್ರೆ ನೀವು ಬದುಕ್ತಿರೇನ್ರಿ .. ಹೇಳಿ ಯಾಕೆ ನಾಚ್ಕೊತೀರ...."

"ಇಲ್ಲ ಬದುಕೋಲ್ಲ"

"ಅಂದಮೇಲೆ— ನಿಮ್ಮ ಖಾಯಿಲೆ ವಾಸಿಯಾಗಿಯೂ ನೀವು ಬದುಕಬೇಕಾದರೆ ನಿಮ್ಮ ಮಾತೋಶ್ರೀಯವರ ಆಗಮನ ಅತ್ಯವಶ್ಯಕ ಅಲ್ವೆ ? ದಾಮೋದರರೆ ?

"ಹೌದು" ಎಂದು ತಲೆ ಹಾಕಿದಾಗ ರುಕ್ಕು ಸ್ವಚ್ಛವಾದ ಅಚ್ಚೇರಿನ ಗಾಜಿನ ಲೋಟದಲ್ಲಿ ತಣ್ಣಗಿನ ಷರಬತ್ತು ತುಂಬಿ ರತಿಯಂತೆ ಬಂದಳು. ಯಾತಕ್ಕಾದರೂ ಬೇಡ ಅಂದೆನೋ ಎಂದು ಮಿರಿ ಮಿರಿ ಮರುಗಿದರು ಡಾ|| ದಾಮೋದರನ್. ನನಗೂ ಒಂದು ಚಿಕ್ಕ ಲೋಟಾದಲ್ಲಾದರೂ ಬೇಕು ಎಂದೆನ್ನುವ ಕೈಂಕರ್ಯ ಕಾಕೋದಳರ ಕಣ್ಣಿನಿಂದ ರುಕ್ಮುವನ್ನೂ ಕುಕ್ಕಿದರು. ನಸುನಾಚಿದ ಆ ಮದಗಜವದನೆ ನೀಳ ನಾಶವನ್ನು ಸೆರಗಲ್ಲಿ ಒರಸಿ, ಲೋಟ ವಿಠ್ಠಲರಾಯನಿಗೊಪ್ಪಿಸಿ ಅಡುಗೆ ಮನೆಗೆ ಅಂತರ್ಧಾನಳಾದಳು.

ವಿಠ್ಠಲರಾಯರು ಅರೆಕಣ್ಣು ಮುಚ್ಚಿ ತಣ್ಣಗಿನ ಯಾಲಕ್ಕಿ ವಾಸನೆಯ ನಿಂಬೆ ಷರಬತ್ತನ್ನು ತಮ್ಮ ಸ್ವಂತ ಮನೆಯಲ್ಲೇ ಮಾಡಿಸಿಕೊಂಡು ಕುಡಿಯುವಂತೆ ಸ್ವಂತ ಗಂಟಲಿಗೆ ಹುಯ್ದುಕೊಂಡರು. ಭಾವಿ ಅಳಿಯನ ಮನೆ ಎಂಬ ಸಂಕೋಚವೇ ಕಾಣಲಿಲ್ಲ ಆ ಪೂರ್ ಲಾಯರಿ ವಿಠ್ಠಲರಾಯರಿಗೆ.

ರುಕ್ಕು ಮತ್ತೆ ಪ್ರತ್ಯಕ್ಷಳಾದಾಗ ಚಿಕ್ಕ ಲೋಟಾದಲ್ಲಿ ಕಾಫಿ ಇತ್ತು, ಬಳುಕುವ ಮುಳ್ಳು ಬಳ್ಳಿಯಂತೆ, ಪಾಪಾಸು ಕಳ್ಳಿಯಂತಹ ಕೈಯ್ಯಲ್ಲಿನ ಕಾಫಿ ಲೋಟವನ್ನು ಭಾವಿ ಪತಿದೈವ ಡಾ|| ದಾಮೋದರನ ಮುಂದೆ ಹಿಡಿದಳು. ಆಹಾ ! ಎಂತಹ ಚೂಟಿಯಾದ ಹುಡುಗಿ, ರುಕ್ಕು ತನಗೆ ಕಾಫಿ ಬೇಕಿತ್ತೆಂಬುದನ್ನು ಊಹಿಸಿ, ಆದೇ ಕರಿ ಕಾಫಿ ಬಣ್ಣದ ಕೈಯ್ಯನ್ನು ಲೋಟ ಸಮೇತ ಚಾಚಿದ್ದಾಳಲ್ಲಾ,

ಲೋಟದೊಡನೆ ಅವಳ ಕೈಯ್ಯನ್ನೂ ಹಿಡಿದುಕೊಳ್ಳಲೇ! ಎಂದೆನಿಸಿತು. ಅದೇನೋ ದಾಕ್ಷಿಣ್ಯ—ಅದೇನೋ ಹಿತವಾದ ವಾತಾವರಣ – ಡಾ|| ದಾಮೂರವರಿಗೆ ಅವರ ಮನೆಯೋ? ಮಾವನ ಮನೆಯೋ? ಎಂಬ ಭ್ರಮೆಯನ್ನುಂಟುಮಾಡಿತು. ನಸುನಾಚಿ ರುಕ್ಕುವಿನ ಕೈಯ್ಯಿಂದ ಕಾಫಿ ಲೋಟ ತೆಗೆದುಕೊಳ್ಳುವಾಗ ಕೈಗೆ ಕೈಸೋಕಿತು. ಅಬ್ಬಾ! ಪ್ರಳಯವೆ? ಭೂಕಂಪವೆ? ವಿದ್ಯುತ್ ತಂತಿ ಸ್ಪರ್ಶವೆ? ಅಲ್ಲ ಅದುರುವಾಯು ಕೆರಳಿದಂತೆ ದೇಹಾದ್ಯಂತ ಬೆವತು ಪುಳುಕಿತನಾದ ಡಾ|| ಯಳಂದೂರ್ ದಾಮು.

"ಬಿಸಿಯೆ ?" ಎಂದರು ಫುಟ್ ಲಾಯರು.

"ಸರಿಯಾಗಿದೆ" ಎಂದು ಕೋಕಿಲ ನಿನಾದದಲ್ಲಿ ರುಕ್ಕು ಹೇಳಿದಳು.

"ಹಿ ಹಿ ಹಿ ಹಿ" ಎಂದರು ಡಾ|| ದಾಮೋದರರು.

ಸುರ್ ಎಂದು ಹೀರಿದಾಗ ತುಟಿ ಸುಟ್ಟಿತು. ಕಣ್ಣು ಮಿಟಿ ಮಿಟಿ ಮಿಟುಕಿಸಿ ನಾಲಿಗೆ ಹಿಂದೆಗೆದು ಹಾವು ತುಳಿದ ಹೈದನಂತೆ ಬೆಚ್ಚಿದರು. ನಿಜಕ್ಕೂ ಕುದಿಯುತ್ತಿತ್ತು ಕಾಫಿ. ಆದರೂ ಕೊಟ್ಟ ಕೈಯಿ—ಅದ ಸ್ಪರ್ಶ, ನೆಟ್ಟ ದೃಷ್ಟಿ ಆ ಮುಹೂರ್ತದಲ್ಲಿ ಕಾರ್ಕೋಟಕ ವಿಷ ತುಂಬಿದ ಪ್ಯಾಲೆ ಕೊಟ್ಟಿದ್ದರೂ ಗುಟುಕರಿಸಿಬಿಡುತ್ತಿದ್ದರು. ಆ ಬಿಸಿಗೆ ಕೈ ಬೆದರಿ ಲೋಟ ಅದುರಿ ಕೆಳಗೆ ಚೆಲ್ಲಿಹೋಯಿತು.

ಗಾಬರಿಯಾಗಿ ರುಕ್ಕು ಓಡಿಬಂದಳು. ಕಂಡದ್ದು ತಂದೆಯ ಕೆಂಚು ಮುಖ—ಭಾವಿ ಗಂಡನ ಗಡಗಡ ನಡುಗುವ ಸ್ಥಿತಿ, ಚೆಲ್ಲಿದ ಕಾಫಿ, ಉರುಳಿದ ಲೋಟ. "ರುಕ್ಕು ಈಗಲೇ ಈ ಪಾಟಿ ಬಿಸಿ ಕೊಡ್ತಾರೆಯೆ ಅವರಿಗೆ, ಆಂ.... ಹದವಾಗಿ ಆರಿಸಿ ಬೇರೆ ಮಾಡಿ ತಂದುಕೊಡು, ಹಾಗೇ ನನಗೂ ಒಂದು ಲೋಟಾ ಹಾಕಿಕೊಡು.... ಒಳ್ಳೆ ಹುಡುಗಿ.... ಅಷ್ಟೂ ತಿಳಿಬೇಡವೆ—ಥತ್...."

"ರೇಗಬೇಡಿ ಮಾವಯ್ಯ—ಏನೋ ಅಚಾತುರ್ಯ ನಡೆದು ಹೋಯ್ತು—ಪ್ರಮಾದವೇನೂ ಆಗಲಿಲ್ಲವಲ್ಲಾ ..."

"ನೀವು ಹೆಂಡ್ತೀನ್ನೋ ಅಭಿಮಾನದಿಂದ ಹೇಳಬೇಡಿ ಡಾಕ್ಟ್ರೆ ಅದೇನು ಅವಳನ್ನು ಪರೀಕ್ಷೆನಾದರೂ ಮಾಡಿ ನೋಡಬಾರದೇ .."

—ಪರೀಕ್ಷೆ....ರುಕ್ಕುವಿನ ನಾಡಿಯ ನುಡಿ ಎಣಿಸೇನೆ—ಅವಳ ಎದೆಯ ಬಡಿತ ಕೇಳೇನೆ! ಮಾವಯ್ಯ ಮುತ್ತಿನಂಥಾ ಮಾತಾಡಿದರು. ಇದೇ ನೆಪದಿಂದ ಅವಳ ಕೈಯ್ಯೇಕೆ ಹಿಡಿಯಬಾರದು? ಎಂಬ ಯೋಚನೆ ಡಾ|| ದಾಮೂರವರ ತಲೆಯನ್ನು ಕೊರೆಯಿತು.

"ಲೇ ರುಕ್ಕು ಬಾರೆಯಿಲ್ಲಿ ಕೈಕೊಡೆ ಡಾಕ್ಟ್ರಿಗೆ - ದಾಮೋದರರೇ ಸರಿಯಾಗಿ ಪರೀಕ್ಷೆ ಮಾಡಿಬಿಡಿ ಇವಳನ್ನ" ಎಂದಾಗ ಮರುಮಾತಾಡದೆ ನಸು ನಾಚಿ ಬಂದು ಮುಂದೆ ಕೈಚಾಚಿದಳು. ಭಾರವಾದ ಕಣ್ಣುಗಳಿಂದ ಪಿಳುಪಿಳುಕಿಸಿ ಅವಳ ಕಾಡಿಗೆಯ ಕಣ್ಣನ್ನೇ ನೋಡುತ್ತಾ ರುಕ್ಕುವಿನ ಕೈಹಿಡಿದರು ಡಾಕ್ಟರು. ಆ ಹ ಹ ಹ... ಅದೇನು ಮಿದುವು—ರೇಷ್ಮೆಯ ಕುಚ್ಚಿನಲ್ಲಿ ಹೆಣೆದ ಕೈಯಂತಿತ್ತು ಆ ಮೃದುವಾದ ಕೈ. ಪುಟ್ ಲಾಯರು ವಿಠ್ಠಲ ರಾಯರು ಅಲ್ಲಿಂದ ಎದ್ದು ಹೊರಕ್ಕೆ ಬಂದರು. ಡಾಕ್ಟರು —ರುಕ್ಕು, ವಸಂತ, ಕೋಗಿಲೆ ಚಂದ್ರ ಚಕೋರ—ನಿಮಿಷ ಐದಾರಾದರೂ ಕೈಯೇ ಬಿಡದೆ ನಿಂತಿದ್ದ ಡಾ|| ದಾಮೂ ನಾಲ್ಕು ಕಣ್ಣು ನೋಟ ಶಿವ ಶಿವ....ಅಡಿಕೆ ಗೋಟು ...ಅಗಿದ ಸೊಕ್ಕು ಬಂದಿತ್ತು ಡಾಕ್ಟರಿಗೆ.

ಹಣೆಯ ಮೇಲೆ ಬೆವರು ಸಾಲು. ಬೆ ಬೆ ಬೆ ಬೆ ಎನ್ನುವ ತೊದಲು ಮಾತು. ರುಕ್ಕು ತಲೆ ತಗ್ಗಿಸಿ ಎಡಗಾಲ ಹೆಬ್ಬೆರಳಿನಿಂದ ನೆಲ ಕೆರೆಯುತ್ತಿದ್ದಳು. ಪ್ರೇಮ ಪೂರಿತ ಕಣ್ಣುಗಳಿಂದ ಭಾವಪರವಶನಾದ ಡಾ|| ದಾಮು ಹಾಗೇ ಎರಡು ಹೆಜ್ಜೆ ಮುಂದಿಟ್ಟು ಮನಮೋಹಿನಿಯ ಒಳಿ ಸಾರಿದ. ಅವಳೂ ಹಾಗೇ ಒಂದು ಹೆಜ್ಜೆ ಮುಂದೆ ಬಂದಳು. ನಿಶ್ಶಬ್ದ—ನೀರವ.

ಆದರೇ ! ...ಇದೇ ಸಮಯಕ್ಕೆ ಕೆಮ್ಮುತ್ತಾ ವಿಠ್ಠಲರಾಯರು ಪ್ರವೇಶಿಸಿದರು. ಬೆಚ್ಚಿಬಿದ್ದ ರುಕ್ಕು-ದಾಮುಗಳು ದೂರ ಸರಿದರು.

"ಬಿಡಬೇಡ ಆ ಕೈ ಬಿಡಬೇಡ ದಾಮೋದರ ...ಹೀಗೇ ನೀವು ಸದಾ ಕೈ ಕೈ ಜೋಡಿಸಿರಬೇಕು."

"ಅದು ಸರಿ, ಅದಕ್ಕೆ ಒಂದೇ ಒಂದು ದೊಡ್ಡ ಚಿಂತೆ ನಂದು"

"ಮತ್ತಿನ್ಯಾವ ಚಿಂತೆ ನಿಮ್ಮದು ?"

"ನಮ್ಮ ತಾಯಿ ಇದಕ್ಕೆ ಒಪ್ಪುವರೋ ಇಲ್ಲವೋ ಆ ಭಯ ಈಗ ಬರ್‍ತಾ ಇದೆ" ಎಂದು ಸಂಕೋಚದಿಂದ ಹೇಳಲಾರದೆ ಹೇಳಿದ ಡಾ|| ದಾಮ್.

"ಓಹೋ—ಹಾಗೋ ವಿಚಾರ—ಹಾಗಾದರೆ ನೀವು ಅಲ್ಲಿಗೇ ಹೋಗಿ ಅವರನ್ನ ಕರ್ಕೊಂಡು ಬಂದ್ರೆ ವಾಸಿ."

"ಅದೇ ಸರಿ, ಅದಕ್ಕೇ ನಾನು ಆವಾಗಲೇ ಹೇಳಿದ್ದು....ಅವರದು ತುಂಬಾ ಕೋಪದ ಸ್ವಭಾವ."

ಅದೆಲ್ಲಾ ಪರವಾಗಿಲ್ಲ—ರುಕ್ಕೂ ನೀನು ಈ ಕೂಡ್ಲೆ—ನಿನ್ನ ತಮ್ಮನಿಗೆ, ಅಣ್ಣನಿಗೆ, ಭಾವನಿಗೆ, ಅಕ್ಕನಿಗೆ, ಅವಳ ಬಳಗಕ್ಕೆ—ಇನ್ನು ನನ್ನ ತಮ್ಮ, ಅವನ

ಅಳಿಯ, ಮಗಳು, ಮಗಳ ಗಂಡ, ಕೈಕೂಸು....ಮತ್ತೆ ನಿನ್ನ ಸೋದರ ಮಾವ, ಅವನ ಹೆಂಡ್ತಿ, ಅವಳ ತಂಗಿ, ತಂಗಿ ಗಂಡ, ಗಂಡನ ತಮ್ಮ, ತಮ್ಮನ ಹೆಂಡ್ತಿ.... ಇಷ್ಟು ಜನಕ್ಕೆ ಕೂಡ್ಲೆ ಕಾಗದ ಹಾಕಿಬಿಡು, "ತಕ್ಷಣ ಬರತಕ್ಕದ್ದು ಮದುವೆ ನಿಶ್ಚಯ ವಾಗಿದೆ ..."

ವಿಠ್ಠಲ ರಾಯರೇ ... ನನ್ನ ತಾಯಿಗೆ ತುಂಬಾ ಮುಂಗೋಪಾಂತ ಅದಕ್ಕೇ ಆಗ್ಲೇ ಅರಿಕೆ ಮಾಡ್ಕೊಂಡೆ. ಇಷ್ಟುಜನ ಆದರೆ ಅವರಿಗೆ ಗಲಾಟೆಹಿಡಿಸದು-ಮೇಲಾಗಿ ಅವರು ಮೊದಲು ಅಸ್ತು ಅನ್ನಲೀಂತ ನನ್ನ ಆಸೆ."

"ಮಗನ ಮದುವೆಗೆ ಅಸ್ತು ಅನ್ನದೆ ಏನು ಮಾಡ್ತಾರೆ—ನೀವು ಅದರ ಚಿಂತೆ ಬಿಡಿ, ಒಪ್ಕೊೋ ಭಾರ ನಂದು, ನಿಮ್ಮನ್ನೇ ಅಸ್ತು ಅನ್ನಿಸಿದ್ದೇನಂತೆ, ಇನ್ನು ನಿಮ್ಮ ಅಮ್ಮನ್ನ "ಹೂಂ" ಅನ್ನಿಸೋದು ಕಷ್ಟವೆ?....ನೀವು ಸಂಜೆ ಮೋಟಾರಿಗೇ ಹೊರಡಿ —ನನ್ನ ಬಳಗವೆಲ್ಲಾ ನಾಡಿದ್ದು ಇಲ್ಲಿ ಇರುತ್ತೆ—ಅಕ್ಕಿ, ಬೇಳೆ—ಕಟ್ಟಿಗೆ ಇದ್ದಲು ಇತ್ಯಾದಿಗಳಿಗೆ ಏರ್ಪಾಟು ಮಾಡಿಬಿಡಿ—ನಾನು ತರಿಸಿ ಹಾಕ್ತೇನೆ, ಬಿಲ್ಲು ನಿಮಗೇ ಕಳಿಸ್ತೇನೆ—ಇನ್ನು ಹುಡುಗಿಗೆ—ಭಂಗಾರ, ಸೀರೆ, ನಿಮಗೆ ವಾಚು, ಸೂಟು ಇತ್ಯಾದಿ—ನನಗೆ ಪಂಚೆ, ಉಡುಗರೆ ಇತ್ಯಾದಿ ಬ್ರಹ್ಮಾಂಡ ಕೆಲಸವಿದೆ, ಇದಕ್ಕೆಲ್ಲಾ ಯಳಂದೂರು ಗದ್ದೆ ಒಂಭು ಎಕರೆ ಮಾರಿದರಾಯ್ತು ...ಅದಕ್ಕೆ ನೀವು ಬೇಗ ನಿಮ್ಮ ತಾಯಿನ್ನ ಕರೆದು ತನ್ನಿ—ಹೊರಡಿ—ರುಕ್ಕು—ಇವರ ಕೋಟು ಹ್ಯಾಟು ಕೊಡೆ— ಹೊರಡಿ—ಬೇಗ ಬನ್ನಿ....ಬರ್‍ತಿರಾ....ಬೈ ಬೈ"

—ಎಂದು ವಿಠ್ಠಲರಾಯ ಸ್ವಂತ ಮನೆಯಿಂದ ಮಾಲೀಕನನ್ನ ಓಡಿಸಿದ. ರುಕ್ಕು ಕಿಟಕಿಯಲ್ಲಿ ನಿಂತು, ಹೋಗುತ್ತಿದ್ದ ಭಾವಿ ಪ್ರಿಯತಮ ಡಾ|| ದಾಮೋದರ ನನ್ನು ನೋಡುತ್ತಿದ್ದಳು. ಡಾ|| ದಾಮೂ ಕೂಡ ಬಾರಿ ಬಾರಿಗೆ ತಿರುತಿರುಗಿ ಇವಳ ನೀಳ ನಾಸಿಕ—ಹೊಳೆವ ತೇಜಃಹುಂಜವಾದ ಕಣ್ಣುಗಳನ್ನು ನೋಡುತ್ತಾ ಯಳಂದೂರಿಗೆ ತೆರಳಿದ. ವಿಠ್ಠಲರಾಯ ಆರಾಮು ಕುರ್ಚಿಯಲ್ಲಿ ಆಕಳಿಸಿದ.

[ಈ ಡಾ|| ದಾಮೋದರರ ವಿವಾಹ ಗೊತ್ತುಮಾಡಿದ ಡಿಸೆಂಬರ್ 1954 ಕೊರವಂಜಿ ಸಂಚಿಕೆಯನ್ನು ಓದಿ, ಇದನ್ನೋದಿದರೆ ರುಚಿ ಹೆಚ್ಚು. ಮುಂದಿನ ತಿಂಗಳು ಡಾ|| ದಾಮೋದರರ ವಿವಾಹ ಮಹೋ ತ್ಸವ ನಿಶ್ಚಯ, ಆ ಮೇಲೆ ವಿವಾಹ]

—ದಾಶರಥಿ ದೀಕ್ಷಿತ್.
[ಭಗವಂತಾ!! ಡಾ| ಸಂ|.]

# ಯಾಲ್ಟಾ ಗುಟ್ಟು ರಟ್ಟು

"ಹಿಂಗಾಗುತ್ತೆ ಅಂತ ನಂಗೇನು ಗೊತ್ತಿತ್ತರಿ?" ಎಂದು ಮೂಗು – ಸೊಂಟಗಳ ಮೇಲೆ ಒಮ್ಮೆಗೇ ಕೈಗಳನ್ನು ಬೇರೆ ಬೇರೆ ಭಂಗಿಗಳಲ್ಲಿ ನಿಲ್ಲಿಸಿದರು ಮಾರಮ್ಮನವರು.

"ಹಿಂಗಾಗುತ್ತೆ ಅಂತ ನನಗೆ ಬಹಳ ಹಿಂದೇನೇ ಗೊತ್ತಿತ್ತು ನಾನಾಗಲೇ ಹೇಳಿರಲಿಲ್ಲವೇ...." ಎಂದರು ಕೆಂಪಣ್ಣನವರು. "ಎಷ್ಟುದಿನ ಅಂತ ಮುಚ್ಚಿಡೋಕ್ಕಾಗುತ್ತೆ ಮಾರಿ .... ಎಂದಾದರೊಂದುದಿನ ಎಲ್ಲ ರಟ್ಟೆ .... ಹ್ಞು ನಡೆಯಲಿ.... ಏನೇನು ಬರೆದಿದೆಯೋ ... ನಮ್ಮ ಹಣೆಯಲ್ಲಿ ."

"ನಮ್ಮ ಹಣೆಯಲ್ಲಲ್ಲ ... ಆ ಸುಂದರಿಯ ಹಣೆಯಲ್ಲಿ ಅನ್ನಿ.. "

"ಅಲ್ಲ ವಿಷಯವೇನು .. ಯಾಕೆ ಹೀಗೆ ಒಬ್ಬೊಬ್ಬರೂ ತಲೆ ಚಚ್ಚಿಕೊಂಡು.... ಒದ್ದಾಡ್ತಿದೀರಿ" — ಅಂದವರು ಪಕ್ಕದವನೆ ಸೋಮಣ್ಣನವರು ಕೈಯಲ್ಲಿದ್ದ 'ಹಿಂದೂ' ಪತ್ರಿಕೆಯನ್ನು ಓದುತ್ತ. ಇಲ್ಲಿ ನೋಡಿರಿ....ಎಂತಹ ಯಾಲ್ಟಾದ ರಹಸ್ಯಗಳೋ ರಟ್ಟುಮಾಡಿದಾರಂತೆ – ಚರ್ಚಿಲ ವಿಚಾರವಾಗಿ ರೂಜವೆಲ್ಟ ಏನೇನೋ ಅಂದಿದ್ದನಂತೆ – ಇಂಗ್ಲಿಷರನ್ನ ಬಯ್ದಿದ್ದನಂತೆ....ಎಲ್ಲ ಒಂಭತ್ತು ವರ್ಷವಾದಮೇಲೆ ರಟ್ಟುಮಾಡಿದ್ದಾರೆ...."

"ಅದೇನು ಮಹಾ ವಿಷಯಾರ‍್ರೀ....ಇಲ್ಲಿ ನಮ್ಮ ಮಾನಕ್ಕೇ ಕುಂದು ಬಂದಿರೋವಾಗ ಏನೋ ಯಾಲ್ಟವಂತೆ – ಗೀಲ್ಟಾವಂತೆ — ಇನ್ನುಮುಂದೆ ಆ ಪಾಪ ಹುಡುಗಿ ಗತಿಯೇನೂ ಅಂತ .. ನನ್ನ ಯೋಚನೆ"–ಇದು ಕೆಂಪಣ್ಣನವರ ಸ್ವಂತ ಮಾತುಗಳು

ಸೋಮಣ್ಣನವರಿಗೆ ತಡೆಯಲಾಗಲಿಲ್ಲ.

"ಅಲ್ಲರೀ ...ವಿಷಯವೇನು – ಗುಟ್ಟು ಏನು – ರಟ್ಟು ಅಂದರೆ ಏನಾಯಿತು ... ಸ್ವಲ್ಪ ಸರಿಯಾಗಿ ತಿಳಿಯೋಹಾಗೆ ಹೇಳಿದರೆ ಆದೀತು. ನನಗೆ ಯಾಲ್ಟಾ ರಹಸ್ಯವೆಲ್ಲ ಸುಲಭವಾಗಿ ಅರ್ಥವಾಗಿ ಹೋಯಿತು. ಆದರೆ ನಿಮ್ಮ ಗುಟ್ಟು ಮಾತ್ರ ಏಕೊ ..."

"ಗುಟ್ಟೇನ್ರಿ....ಇನ್ನು....ಎಲ್ಲ ಮನೆಹಾಳು .. ನಾನು ಅವತ್ತೇ–ಅಂದರೆ ಈಗ್ಗೆ ಹತ್ತುವರ್ಷದ ಕೆಳಗೇ ಹೇಳಿದೆ ಇವಳಿಗೆ. ಬೇಡ–ಸುಳ್ಳು ಹೇಳೋದು ಬೇಡ....ಕಾಲ ಕೆಟ್ಟದ್ದು ಅಂತ....ಅವಳ ಹಣೆಯಲ್ಲಿ ಬರೆದಹಂಗಾಗಲಿ ...ಇದ್ದದ್ದನ್ನ ಹೇಳಿಬಿಡೋಣ.... ಅಂತ....ನನ್ನ ಮಾತು ಕೇಳಿದರೆ ತಾನೆ ..."

"ಹಿಂಗಾಗುತ್ತೆ ಅಂತ ನನಗೇನು ಸ್ವಪ್ನ ಬೀಳಬೇಕೆ? ಅಲ್ಲಿ ಇಲ್ಲಿ ಹೋಗಿ ಏನೋ ನನ್ನ ತಮ್ಮ ಅಂತ ನಾನು ಈ ವಿಚಾರಾನ್ನ ನಮ್ಮ ಭೀಮೂಗೆ ಹೇಳಿದರೆ ಅವನು ಈಗ ಈ ಥರ ನನ್ನಮೇಲೆ ಸೇಡುತೀರಿಸಿಕೋತಾನೆ ಅಂತ ನನಗೆ ತಿಳಿದಿರಲಿಲ್ಲ.

ನಾನು ಎಷ್ಟು ಹೇಳಿದೆ ನಿಮಗೆ .... ಅವನಿಗೊಂದು ಕೆಲಸ ಕೊಡಿಸಿಬಿಡಿ .... ನಿಮ್ಮ ತಾಲ್ಲೂಕ್ ಆಫೀಸಿನಲ್ಲೇ ಅಂತ .... ನೀವು ಕೇಳಿದಿರೇನು .... ಸಮಯ ಕಾದು ಕಿಡಿ ಇಟ್ಟ...."

ಸೋಮಣ್ಣನವರು ಕೈಯಲ್ಲಿದ್ದ ಪತ್ರಿಕೆಯನ್ನೇ ಬೀಸಣಿಗೆಯಾಗಿ ಬೀಸಿಕೊಂಡರು. ಉಸ್ಸೆಂದರು. ಅವರಿಗಂತೂ ಅರ್ಥವಾಗಲಿಲ್ಲ. ಅವರು ಎಷ್ಟೆಷ್ಟೊ 'ಚಕ್ರಬಂಧ' ಸ್ಪರ್ಧೆಗಳನ್ನೆಲ್ಲ ಬಿಡಿಸಿದ್ದರು; ಲಕ್ಷ ರೂ ಬರದಿದ್ದರೂ ಎಂಟಾಣೆ 'ವೋಚರು'ಗಳು ಬರುತ್ತಿದ್ದುವು....

"ಅಲ್ಲಾಂದ್ರೆ....ಈಗ ಆತ ಅನ್ನೋದಾದ್ರೂ ಏನು... ಡೈವೋರ್ಸ್ ಮಾಡ್ತೀನೆ ಅಂತ ಹೇಳ್ತಾನೆಯೇ....ಏನು...."

"ಡೈವೋರ್ಸೋ – ಯಾವ ಕೋರ್ಸೋ ... ನೀನಾಯಿತು – ನಿನ್ನ ಮಗಳಾಯಿತು .. ಇನ್ನು ನನಗೆ ಆ ವಿಚಾರದ ಯೋಚನೆಯೇ ಬೇಡ" — ಇವು ಮತ್ತೆ ಕೆಂಪಣ್ಣನವರ ವಚನಗಳೇ. "ಅಲ್ರಿ....ರಾಯರೇ. ಕತೆ ಹೇಳ್ತೀನಿ ಕೇಳಿ....ಈಗ್ಗೆ ಹತ್ತುವರ್ಷಗಳ ಕೆಳಗೆ ನನ್ನ ಮಗಳಿಗೆ ಆಗತಾನೇ ಅಮೆರಿಕದಿಂದ ಬಂದಿದ್ದ ಡಾ|| ರಾಜನನ್ನು ಕೊಟ್ಟು ಮದುವೆಮಾಡಿದ ಸುದ್ದಿ ನೀವು ಪೇಪರಿನಲ್ಲಿ ಓದಿರಬಹುದು. ಆಗ ಆತನ ಒಂದು ಕಂಡಿಷನ್ನೇನಪ್ಪಾಂದರೆ ಹುಡುಗಿ ಓದಿರಬೇಕೂಂಬೋದು. ನಮ್ಮ ಸುಂದರಿ ಲೋವರ್ ಸೆಕೆಂಡರೀನೂ ದಾಟಿರಲಿಲ್ಲ — ಆದರೂ ಇಂಟರ್ ಪಾಸು ಅಂತ ಹೇಳಿದ್ವಿ. ಅಂತೂ ಬಹಳ ಕಷ್ಟಪಟ್ಟು ಅವನನ್ನು ಒಪ್ಪಿಸಿದೆವು. ಮದುವೆಯಾಯಿತು .. ಮಕ್ಕಳಾಯಿತು... ಮೊನ್ನೆ ಏನೋ ಇದ್ದಕ್ಕಿದ್ದಂಗೆ ನನ್ನ ಹೆಂಡತಿ ತಮ್ಮ ಇದ್ದಾನಲ್ಲ .. ಆ ಭೀಮಣ್ಣ–ಅವನು ಏನೋ ಮೊನ್ನೆ ಮಾತಿಗೆ ಮಾತು ಬಂದು ಸುಂದರಿ ನಿಜವಾಗಲೂ ಇಂಟರ್ ಪಾಸುಮಾಡಿಲ್ಲ ಬರೀ ಲೋವರ್ ಸೆಕೆಂಡರೀ . ಅಂತ ಹೇಳಿದನಂತೆ. ಇದಕ್ಕೇನು ಸಬೂಬು – ಎಂದು ನನ್ನಳಿಯ ಕೇಳಿದನಂತೆ. ನಮ್ಮ ಭೀಮಣ್ಣ ಅನಾವಶ್ಯಕವಾಗಿ ನನ್ನ ಹೆಂಡತಿ ಅವನಿಗೆ ಬರೆದಿದ್ದ ಒಂದು ಕಾಗದವನ್ನು ತೋರಿಸಿದನಂತೆ — ಅದು ಹತ್ತುವರ್ಷದ ಕೆಳಗಿಂದು ೧೯೪೫ ನೆಯ ಇಸವಿಯದು .... ಮಾರ್ಚಿ ತಿಂಗಳಲ್ಲಿ ಬರೆದಿದ್ದು ... "ಇದನ್ನು ಯಾರಿಗೂ ತೋರಿಸಬೇಡ – ಓದಿದಕೂಡಲೇ ಹರಿದುಹಾಕಿಬಿಡು– ಈ ವಿಷಯ ರಹಸ್ಯವಾಗಿರಲಿ" ಎಂದೂ ಬರೆದಿದ್ದಳಂತೆ — ಈಗ ನನ್ನ ಅಳಿಯ ಇದರಿಂದ ತನ್ನ ಗೌರವಕ್ಕೇ ಧಕ್ಕೆ ಬಂದಿದೆಯೆಂದು – ನಾವು ಅವನಿಗೆ ಸುಳ್ಳು ಹೇಳಿದೆವೆಂದು – ಕೂಗಾಡುತ್ತಿದ್ದಾನೆ ... ಈಗ ಸುಂದರಿಯನ್ನು ಬಿಟ್ಟು ಬೇರೆ ಓದಿದ ಹುಡುಗಿಯನ್ನೇ ಮದುವೆಮಾಡಿಕೊಳ್ಳುತ್ತೀನಿ ಅಂತ ಹಾರಾಡುತ್ತಿದ್ದಾನೆ....ಏನು ಮಾಡಬೇಕೋ ಗೊತ್ತಾಗಿಲ್ಲ"

ನನಗಂತೂ ಏನು ಹೇಳಬೇಕೋ ತೋಚಲಿಲ್ಲ.

ಅಮೇರಿಕದ ಡಲ್ಲೇ ಶನಿಗೇ ಒಂದುವೇಳೆ ಗೊತ್ತಾದರೂ ಗೊತ್ತಾಗಬೇಕು

— ಬಿ. ಎಸ್. ಮೂರ್ತಿ.

# ಸಾಮಿಯ ಹಾಸ್ಯಗಾರಿಕೆ

ಅನ್ನ, ಈರುಳ್ಳಿ ಹುಳಿ, ಆಲೂಗಡ್ಡೆ ಪಲ್ಯ, ಹುರುಳಿ ಹಪ್ಪಳ, ಸ್ವಲ್ಪ ಮಿಡಿ ಕಾಯಿರಸ, ಇವೇ ಆನಂದಕ್ಕೆ ತಳಹಾಯು ಎಂಬ ಸಿದ್ಧಾಂತ ಸಾಮಿಗೆ. ನಗು ನಗುವಿನ ಮಾತುಗಳು, ನಗುಬರುವ ಮಾತುಗಳು, ನಗುವಿನಿಂದಲೇ ಆತ್ಮಸಾಕ್ಷಾತ್ಕಾರ ಪಡೆಯಬಹುದೆಂದೇ ಸಾಮಿಯ ನಂಬಿಕೆ. ನಿರ್ದಯನಾದ ದೇವರು ಅವನ ನಾಲಿಗೆಗೆ ಈ ಎರಡೂ ರುಚಿ ಅಭಿರುಚಿಗಳನ್ನು ಹೇರಳವಾಗಿ ಹೇರಿಸಿದ್ದನು.

ರಾಮನವಮಿ ಬೆಳಿಗ್ಗೆ ಸಾಮಿ, "ಯಾಕೋ ಇರಸು ಮುರುಸಾಗಿದೆ, ಸಾಯಂಕಾಲಕ್ಕೆ ರಾಮ ಮಂದಿರದಲ್ಲಿ ಭಾಷಣ ಬೇರೆ ಇದೆ. ಇಂದಿನ ಜೀವನಕ್ಕೆ ಶ್ರೀರಾಮನ ಆದರ್ಶ ಯಾವರೀತಿ ಇರಬೇಕು ಎಂಬುದನ್ನು ನಕ್ಕು ನಗಿಸುವ ರೀತಿಯಲ್ಲಿ ಸಭಿಕರಿಗೆ ಹೇಳಬೇಕು. ಕೇಳಿದಾಗ ನಕ್ಕು, ಮನೆಗೆ ಹೋದಮೇಲೆ ಮೆಲುಕು ಹಾಕಿದಾಗ ಪೂರ್ಣ ಅರ್ಥ ತಿಳಿದು ಪರಿಣಾಮಕಾರಿಯಾಗುವ ರೀತಿಯಲ್ಲಿ ಭಾಷಣ ಮಾಡಬೇಕು. ಅದಾಗಬೇಕಾದರೆ ದೇಹಸ್ಥಿತಿ ಸರಿಯಾಗಿರಬೇಕು. ಡಾಕ್ಟರನ್ನು ಒಮ್ಮೆ ಕೇಳೋಣ" ಎಂದು ಅಂದುಕೊಂಡು ಡಾಕ್ಟರ ದವಾಖಾನೆಗೆ ದಾರಿ ತಪ್ಪಿದವನಂತೆ ನುಗ್ಗಿದ.

ಡಾಕ್ಟರು ಪರೀಕ್ಷೆಮಾಡಿ, ನಿನಗೆ ಸಿಹಿಮೂತ್ರ ರೋಗ ಶುರುವಾಗಿದೆ ಕಠಿಣ ಪಥ್ಯ ಇದ್ದು ಮುಂಬರುವ ಹಾನಿಗಳನ್ನು ನಿವಾರಿಸಿಕೊಳ್ಳಬೇಕು ಎಂದೆಲ್ಲಾ ಉಪದೇಶವಿತ್ತರು.

ದೇಹಸ್ಥಿತಿ ಚೆನ್ನಾಗಿದ್ದು ಕತ್ತೆಯಂತೆ ದುಡಿದು ಸಂಪಾದಿಸಿದರೇನೇ ಸಾಮಿಗೆ ಎರಡುಹೊತ್ತು ಅಡಿಗೆಯವನ ಊಟ ಮನೆಯಲ್ಲಿ ಸಿಗುವ ಸಂಭವ. ಆದರ್ಶ ಊಟವಲ್ಲದಿದ್ದರೂ ಹೊಟ್ಟೆ ತುಂಬುವ ಊಟ. ದೇಹಸ್ಥಿತಿ ಕೆಟ್ಟು ಸಂಪಾದನೆ ಸುಸ್ತಾದಾಗ ಅದೂ ಇದೂ ರುಚಿಯಾದ ಪಥ್ಯ ಬಯಸುವುದು ಕೇವಲ ಹುಚ್ಚುತನ ಎಂದು ಸಾಮಿಗೂ ಗೊತ್ತು—ಅವನ ಸಂಸಾರ ಅವನಿಗೆ ತಿಳಿಯದೇ?

ಕಾರಣ ಸಾಮಿಯು ಸ್ವಯಂಪಾಕಕ್ಕೆ ಸುಲಭವಾದ, ಕಾಯಿಲೆಗೆ ತಕ್ಕುದಾದ ಪಥ್ಯದ ಪಟ್ಟಿಯನ್ನು ತಯಾರಿಸಿಕೊಂಡ. ರಾಮನವಮಿಯಿಂದ ಅದನ್ನು ಆರಂಭಿಸಲೂ ಮನಸ್ಸುಮಾಡಿದ. ಹೆಸರುಬೇಳೆ ಕೋಸುಂಬರಿ, ಮಜ್ಜಿಗೆ, ಬಾಳೇಹಣ್ಣು ಇದೇ ಅವನ ಹೊಸಜೀವನದ ಚೊಚ್ಚಲು ಊಟ. ಹಿಂದಿನ ದಿನಗಳ ಆಶೆಗಳನ್ನು ಮರೆಯಲಾರದೆ, ಮುಂದಿನ ದಿನಗಳ ಕಷ್ಟಗಳನ್ನು ಊಹಿಸದೇ ಇರಲಾರದೆ ಸಂಜೆ ತನಕ ಕಾಲಕಳೆದ. ರಾಮ ಮಂದಿರದಲ್ಲಿ ಭಾಷಣವನ್ನೇನೋ ಸಂಜೆಗೆ ಮಾಡಿದ

* * *

"ನಕ್ಕೂ ನಕ್ಕೂ ಹೊಟ್ಟೆ ಹುಣ್ಣಾಗಿ ಹೋಯ್ತಮ್ಮಾ! ಅಲ್ಲಾ ಕಣ್ರೀ ಅಂಥಾ ರಾಮ ನಿಗೂ ಕೈಮುಗ್ಗದ ಸಪ್ತಾಹದ ಸಲುವಾಗೇ ನಾರುಮಡಿ ಉಡಬೇಕೆಂದು ಆಜ್ಞೆ ಯಾಗಿತ್ತು ಅಂದಾಗ ನನಗೇಕೋ ಕಚಗುಳಿ ಇಟ್ಟಹಾಗಾಯಿತು. ಸಾಮಿಯವರು ಮನೆಯಲ್ಲಿ ಎಷ್ಟು ನಗುತಾ ಇರಬೇಕಮ್ಮಾ" ಅಂದರು, ಸುಂದರಮ್ಮನವರು ಭಾಷಣ ಕೇಳಿದನಂತರ ಮನೆಗೆ ಹಿಂತಿರುಗುತ್ತಾ-ಕರುಬಿನ ದನಿಯಲ್ಲಿ—

"ಅಲ್ಲ್ರೀ! ರಾಮರಾಜ್ಯದಲ್ಲಿ ಎಲ್ಲರೂ ಹೊಟ್ಟೆತುಂಬಾ ಉಂಡು ಮೈತುಂಬಾ ಉಟ್ಟು, ಭವಿಷ್ಯದ ಭೀತಿ ಇಲ್ಲದೆ ಸುಖವಾಗಿದ್ದರು. ಆದರೆ ಶ್ರೀರಾಮಚಂದ್ರ! ಬಾಲ್ಯದಲ್ಲಿ ಋಷಿಗಳ ಜತೆ-ಪ್ರಾಯದಲ್ಲಿ ಕಪಿ ಕರಡಿಗಳ ಸಖ್ಯ. ಎಣ್ಣೆ ಬರೋ ಹೊತ್ತಿಗೆ ಅಗಸ ಅಂದ ಅಂತ ಸನ್ಯಾಸಾಶ್ರಮ! ಈಗಿನ ಕಾಲದಲ್ಲಿ, ರಾಮರಾಜ್ಯದಲ್ಲಿ ರಾಜದಂಡ ಆಡಿಸೋರು ಮೈತುಂಬಾ ಉಟ್ಟು, ಹೊಟ್ಟೆ ಬಿರಿಯ ಉಂಡು, ಭವಿ ಷ್ಯಕ್ಕೆ ಭೀತಿಯಿಲ್ಲದಂತೆ ತಮ್ಮ ಗೂಡಿಗೆ ಬಂಗಾರದ ತಗಡು ಬಡಾಯಿಸ್ತಾರೆ. ಆದರೆ ಉಳಿದ ಪ್ರಜೆಗಳು ಶ್ರೀರಾಮಚಂದ್ರನಂತೇ ಪಾಡುಪಡಬೇಕು" ಅಂದಾಗ, ನಮ್ಮ ಅಳಧಿಕಾರಿಗಳ ಜ್ಞಾಪಕ ಬಂದು ಹೌದಲ್ಲಾ! ಎನ್ನಿಸಿತಮ್ಮಾ ಬಲು ಖುಷಿಯಾಯ್ತು ಎಂದರು ಕಡೇಮನೆ ಕಾವೇರಮ್ಮ—

"ಭಾಷಣ ಮಾಡುಕ್ಕೇನ್ರಿ ಕಷ್ಟ, ಆದರೆ ಹಾಗೆ ನಡೆದುಕೊಳ್ಳಬೇಕಾದರೆ ಬಲು ಕಷ್ಟ. ನಮಗೆ ಹೇಳೋವಾಗ ನಗಿಸ್ತಾ ಹೇಳಬಹುದು. ಒಪ್ಪಿದೆ, ಆದರೆ ಮನೆಗೆ ಹೋದಮೇಲೆ ನಗ್ತಾ ಜೀವನ ಮಾಡ್ತಾನೇ ಅಂಬೋದು ಅಷ್ಟು ನಂಬೋಹಾಗಿಲ್ಲ" ಎಂದರು ಸುಂದರಮ್ಮನ ಯಜಮಾನರು—ಸಂತಸ ದನಿಯಿಂದ—

"ಬಿಡ್ರಿ! ಅವೆಲ್ಲಾ ಗೊತ್ತು ಹಾಸ್ಯದ ಮಾತನಾಡೋರೆಲ್ಲಾ ಹೀಗೆ. ಖಜಾ ನೇಲಿ ಕಾರಕೂನ ಇದ್ದಂತೆ ಚೀಟಿ ತಂದ ಭಂಡರಿಗೆಲ್ಲಾ ಬೊಗಸೆ ಬೊಗಸೆ ಹಣ ಕೊಡುತ್ತಿದ್ದರೂ ಅವರ ಪಾಲಿಗೆ ತಿಂಗಳ ಕೊನೆಯಲ್ಲಿ ಅಂಬಲಿ ತುಂಬೇ ಸೊಪ್ಪಿನ ಸಂಬಳವೇಗತಿ. ಆ ಗೋಳು ತೇಲಿಸಿಕೊಳ್ಳೊಕೋಸ್ಕರ ಅವರುಗಳು ಈ ನಗುವಾಟ ಹೂಡ್ತಾರೆ; ನಾಟಕ ನೋಡಿ ನಾವು ಸಂತೋಷ ಪಡೋಹಾಗೆ, ನಾಟ್ಕಾ ಆಡಿ ಅವರು ಸಂತೋಷಪಡ್ತಾರೆ, ಇವರುಗಳಿಗಿಂತ ನಾವೇ ಎಷ್ಟೋ ಪುಣ್ಯವಂತರು" ಎಂದು ಕಾವೇರಮ್ಮನವರ ಯಜಮಾನರಂದರು, ತೃಪ್ತಿಯ ದನಿಯಲ್ಲಿ.

ಇದನ್ನೆಲ್ಲಾ ಕೇಳಿಸಿಕೊಂಡು ಸಾಮಿ ಮನೆಗೆ ಬಂದು ಬಾಳೇ ಹಣ್ಣುಂಡು ಮಲಗಿಕೊಂಡ. ಹಾಸ್ಯಗಾರಸಾಮಿ ಕನಸಿನಲ್ಲೂ ನಗಲಿಲ್ಲ.

—ಪ್ರಸಾದ್.

---

# ಮುಂದಿನ ಬದಲಾವಣೆ

| ಬೆಂಗಳೂರು : | ಮೈಸೂರು : | ಹಾಸನ : | ಚಿತ್ರದುರ್ಗ : |
|---|---|---|---|
| ಗೀತಾ | ನ್ಯೂ ಅಪೇರಾ | ಇಂಪೀರಿಯಲ್ | ಶಂಕರ್ |
| ದಾವಣಗೆರೆ : | ಮಡಕೇರಿ : | ಚಿಕ್ಕಮಗಳೂರು : | ಶಿವಮೊಗ್ಗ |
| ಅಶೋಕ | ಕೋಹಿನೂರ್ | ಜ್ಯೋತಿ ಸೆಂಟ್ರಲ್ | ಸುದರ್ಶನ |
| ಮಂಗಳೂರು : | ಕೋಲಾರ : | | |
| ನ್ಯೂ ಚಿತ್ರಾ | ವೆಂಕಟೇಶ್ವರ | ಮತ್ತಿತರ ಕೇಂದ್ರಗಳಲ್ಲಿ | |




**ಸಂಧ್ಯಾ—ವಿದ್ಯಾವತಿ—ಅಶ್ವತ್ಥ್—ಕೌಶಿಕ್—ಪೊನ್ ವಯಲ್ ಸುಶೀಲ**

ಇದರಲ್ಲಿ ಮೊದಲಬಾರಿಗೆ
ಎನ್. ಎಸ್. ಕೃಷ್ಣ
ಟಿ. ಎ. ಮಧುರಂ
ಇವರ ಹಾಸ್ಯಾಭಿನಯ !

ಮಿನಾಕ್ಷಿಪೂರಳ
ಹಿನ್ನಲೆ ಹಾಡುಗಾರಿಂಗೆ !!

ವಕ್ಷಿಣ ಭಾರತದಲ್ಲಿ ಮೊವಲನೆಬಾರಿಗೆ
ಗೇವಾಕಲರ್ ಉಳ್ಳ ಈ ಚಿತ್ರದಲ್ಲಿ
'ಸತ್ಯವಾನ್ ಸಾವಿತ್ರಿ' ಸ್ವಪ್ನದೃಶ್ಯ
ಒಂದು ವಿಶೇಷ ! ! !

***For Particulars :***

**RAGHAVENDRA PICTURES**

GANDHINAGAR : : BANGALORE-2.

**THE CANARA MU'UAL ASSURANCE Co., Ltd.**

Managing Director :—T. R. A. PAI

Head Office: UDIPI, S. India] [Estd: 1935

**ಅತ್ಯುತ್ತಮ ಬೋನಸ್**

ಲಾಭ ಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

| ರೂ. 18/- | ರೂ. 15/- |
|---|---|
| ಹೋಲ್ ಲೈಫ್ ಎಶ್ಯೂರೆನ್ಸಿಗೆ | ಎಂಡೋಮೆಂಟ್ ಎಶ್ಯೂರೆನ್ಸಿಗೆ |

31-12-1953ನೇ ತಾರೀಖಿಗಾದ 1951 ರಿಂದ 1953ರ ವರೆಗಿನ ಅವಧಿಯ ವಿಮಾ ಗಣನೆಯ ಫಲಿತಾಂಶ.

**ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಪ್ರಧಾನಕಾರ್ಯಾಲಯ: ಉಡುಪಿ, ದ. ಭಾರತ] [ಸ್ಥಾಪನೆ: 1935

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:

**HE COMMERCIAL CORPORATION OF INDIA, LTD.,**

UDIPI, S INDIA.


# ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪು ನೆಪ್ಪುಗಳು ಕಡಿಮೆಯಾಗುವುವು. ಒಪ್ಪಿದ ಲೇಖನಗಳಿಗೆ ಪ್ರತ್ಯುತ್ತರ ಉಂಟು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ೨

**ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩—೦—೦**

**ಬಿಡಿ ಪ್ರತಿ ಕೇವಲ ಆಣೆ ೦—೪—೦**

**ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.**

ಮನೆಗೆ ಕಾಂತಿ ! ಮನಸಕ್ಕೆ ಶಾಂತಿ !! ದೇಹಕ್ಕೆ ವಿಶ್ರಾಂತಿ !!!

ಕಣ್ಮನಗಳಿಗೆ ತಂಪು ಬೀರುವುದು,
ದೇದೀಪ್ಯಮಾನ

# ಮೈಸೂರು ಬಲ್ಬು




ಅದು ಭಾರತದ್ದು !
ಸುಲಭ ಬೆಲೆಯದು !
ಹೆಚ್ಚು ಬಾಳಿಕೆ ಬರುವುದು !!

ಫೋನ್ : 2025 ಗ್ರಾಮ್ : 'Mysorlamp'

— o —

**ಮೈಸೂರು ಲ್ಯಾಂಪ್ ವರ್ಕ್ಸ್ ಲಿ.,**

ಮಲ್ಲೇಶ್ವರಂ - - - ಬೆಂಗಳೂರು 3




# ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

**ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,**

ಮಲ್ಲೇಶ್ವರಂ - - - ಬೆಂಗಳೂರು 3.

Printed by B. S. Iyengar, Bangalore City.
Publisher—B N. Gupta. Editor—M Sivaram.